೬. ಮಾಹಿತಿ ಮತ್ತು ವಿವೇಕ

ಬೇಡದ ಮಾಹಿತಿ, ಕೈಗೆಟುಕದ ವಿವೇಕ

Where is the life we have lost in living?

Where is the wisdom we have lost in knowledge?

Where is the knowledge we have lost in Information?

ಎಲಿಯಟ್ ಕವಿಯ ಈ ಸಾಲುಗಳನ್ನು ನೋಡಿದಾಗ ಎರಡು ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಸಹಜವಾಗಿ ಬದುಕಬೇಕಾಗಿರುವ ಈ ಬದುಕನ್ನು ನಮ್ಮ ಕಲ್ಪನೆಯ ಚೌಕಟ್ಟಿಗೆ ಒಳಪಡಿಸಿ ಅದಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಲೇ ನಾವು ನಿಜವಾದ ಬದುಕನ್ನು ಕಳೆದುಕೊಳ್ಳುತ್ತೇವೆ. ಸಹಜವಾದ ಬದುಕಿಗೆ ಬೇಕಾಗಿರುವುದು ವಿವೇಕವೇ ಹೊರತು ಮಾಹಿತಿಯಲ್ಲ. ಆದರೆ ನಮ್ಮ ಇಡೀ ಸಾಮಾಜಿಕ ಪರಿಸರ ಮಾಹಿತಿಯನ್ನೇ ಮುಂದುಮಾಡುತ್ತದೆ. ಏಕೆಂದರೆ ಅಸಾಧಾರಣ ಮಾಹಿತಿ ತನ್ನ ತುದಿನಾಲಗೆಯಲ್ಲೆ ಇದ್ದರೆ ಸುಲಭವಾಗಿ ಎಲ್ಲರನ್ನೂ ಮೀರಿನಿಲ್ಲಬಹುದು; ತನ್ನ ದೃಷ್ಟಿಕೋನವನ್ನು ರುಜುವಾತುಪಡಿಸಬಹುದು. ಇತರರು ದಂಗುಬಡಿದು ಸೋತು ತಲೆತಗ್ಗಿಸಿ ನಿಲ್ಲುವಂತೆ ಮಾಡಬಹುದು. ದಿನನಿತ್ಯದ ಜೀವನದಲ್ಲಿ ಈ ಬಗೆಯ ಮಾಹಿತಿ ಬೇಕಾಗುವುದು ಯಾವುದೋ ಅಪರೂಪದ ಸಂದರ್ಭದಲ್ಲಿ. ಇಂತಹ ಒಂದು ಕ್ಷುಲ್ಲಕ ಮಾಹಿತಿಗಾಗಿ ಇಡೀ ಬದುಕಿನ ಅಮೂಲ್ಯ ಸಮಯವನ್ನು ವಿನಿಯೋಗಿಸುತ್ತೇವೆ. ಮಾಹಿತಿ ಎನ್ನುವುದು ಮಾತ್ರ ನಾವು ಬದುಕಿಗಾಗಿ ನಡೆಸುವ ಸಿದ್ಧತೆ ಇಡೀ ಬದುಕನ್ನು ನಮ್ಮ ಕಲ್ಪನೆಯ ಬದುಕಿಗೆ ಸಿದ್ಧಪಡಿಸಿಕೊಳ್ಳುತ್ತಲೇ ಕಳೆದುಬಿಟ್ಟರೆ ಬದುಕುವುದಾದರೂ ಯಾವಾಗ? ಬದುಕಿನ ಸೌಂದರ್ಯವನ್ನು ಸಂತೋಷವನ್ನು ಸವಿಯುವುದು ಯಾವಾಗ? ಸ್ವಾಮಿ ವಿವೇಕಾನಂದರು ಹೇಳುವಂತೆ, ತಲೆಯಲ್ಲಿ ಆಜೀವಪರ್ಯಂತ ಪಚನವಾಗದೆ ಗದ್ದಲ ಎಬ್ಬಿಸುತ್ತದೆ. ಇಂತಹವರು ತಮ್ಮ ಮೃಗೀಯ ಸ್ವಭಾವಗಳಿಗೆ ಅನುಕೂಲವಾಗುವಂತೆ ಮಾಹಿತಿಯನ್ನು ಬಳಸಿಕೊಳ್ಳುತ್ತಾರೆ. 'ಕೋತಿ ತಾನು ಕೆಡೋದಲ್ಲದೆ ವನಾನೆಲ್ಲ ಕೆಡುಸ್ತು' ಎಂಬ ಗಾದೆಯಂತೆ ಇವರು ತಮ್ಮ ಸುತ್ತ ಸಹಜವಾಗಿ ಬದುಕುವವರನ್ನು ಕಕ್ಕಾಬಿಕ್ಕಿ ಮಾಡಿ ದಾರಿ ತಪ್ಪಿಸುತ್ತಾರೆ.

ತಂತ್ರಜ್ಞಾನವನ್ನು ಬಳಸಿ ಮಾಹಿತಿಯನ್ನು ಸಂಗ್ರಹಿಸಲು, ವರ್ಗೀಕರಿಸಲು, ಬಳಸಲು ಚುರುಕಾದ ಬುದ್ಧಿ ಇದ್ದರೆ ಸಾಕು. ಅದಕ್ಕೆ ವಿವೇಕ ಬೇಕಾಗಿಲ್ಲ. ನಿಜ ಹೇಳಬೇಕೆಂದರೆ ಚುರುಕು ಬುದ್ಧಿ ಇಲ್ಲದ ಮಂದಮತಿಯೊಬ್ಬನಿಗೆ ವಿವೇಕವೂ ಸಾಧ್ಯವಾಗುವುದಿಲ್ಲ. ವಿವೇಕ ಸಾಧ್ಯವಾಗುವುದು ಚುರುಕು ಬುದ್ಧಿಯ ಸಾತ್ತ್ವಿಕ ವ್ಯಕ್ತಿಗೆ. ಆದರೆ ಅವನು ಚುರುಕುಬುದ್ಧಿಯ ಚತುರತೆಯಿಂದಷ್ಟೇ ತೃಪ್ತನಾಗುವುದಿಲ್ಲ. ಅವನಿಗೆ ಸಿಗುವ 'ಅನುಸರಣೀಯ ಜೀವನಮಾದರಿ'ಗಳು ಮನುಷ್ಯನ ಮಾತುಗಾರಿಕೆಗಿಂತ ನಡವಳಿಕೆಯಲ್ಲಿ ಕಂಡುಬರುವ ವಿವೇಕದ ಮಹತ್ತ್ವವನ್ನು ಮನವರಿಕೆ ಮಾಡಿಕೊಡುತ್ತವೆ. 'ಅನುಸರಣೀಯ ಜೀವಂತ ಮಾದರಿ' ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕು. ಏಕೆಂದರೆ ನಡವಳಿಕೆಯ ಜೀವಂತ ಮಾದರಿ ಮಾತ್ರ ಮತ್ತೊಬ್ಬರಲ್ಲಿ ಪ್ರೇರಣೆಯನ್ನು ಉಂಟುಮಾಡಲು ಸಾಧ್ಯ. ವಿವೇಕಯುತವಾದ ನಡವಳಿಕೆಯನ್ನು ಮನುಷ್ಯ ಕೇವಲ ಪುಸ್ತಕ ಓದಿ ಪಡೆಯುವುದು ಸಾಧ್ಯವಿಲ್ಲ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನಿಜವಾದ ಅಧ್ಯಾಪಕ ಯಾರೆಂದರೆ ಅವನು ಏಕಾಏಕಿ ಮಗುವಿನ ಮಟ್ಟಕ್ಕೆ ಇಳಿದುಬಿಡುತ್ತಾನೆ; ತನ್ನ ಆತ್ಮವನ್ನು ಮಗುವಿನ ಆತ್ಮಕ್ಕೆ ವರ್ಗಾಯಿಸುತ್ತಾನೆ; ಮಗುವಿನ ಕಣ್ಣುಗಳ ಮೂಲಕ ನೋಡುತ್ತಾನೆ, ಮಗುವಿನ ಕಿವಿಗಳ ಮೂಲಕ ಕೇಳಿಸಿಕೊಳ್ಳುತ್ತಾನೆ, ಮಗುವಿನ ಮನಸ್ಸಿನ ಮೂಲಕ ಅರ್ಥ ಮಾಡಿಕೊಳ್ಳುತ್ತಾನೆ. ಇಂತಹ ಅಧ್ಯಾಪಕ ಮಾತ್ರ ಬೋಧಿಸಬಲ್ಲ."

ಈ ಬಗೆಯ ಸಂವಹನ ಯಾವ ಅಧ್ಯಾಪಕನಿಗೆ ಸಾಧ್ಯವಾಗುತ್ತದೆ? ಯಾವ ಅಧ್ಯಾಪಕನಿಗೆ ಮಗುವಿನ ಬಗ್ಗೆ ಪ್ರೀತಿ ಇದೆಯೋ, ಯಾವ ಅಧ್ಯಾಪಕನಿಗೆ ಈ ಬದುಕು ಕೇವಲ ಮಾಹಿತಿ ಸಂಗ್ರಹಿಸುವುದಲ್ಲ ಎಂಬ ಜ್ಞಾನ ಇದೆಯೋ, ಯಾವ ಅಧ್ಯಾಪಕನಿಗೆ ವಿವೇಕ ಉಂಟಾಗಿದೆಯೋ ಅಂತಹ ಅಧ್ಯಾಪಕನಿಗೆ ಮಗುವನ್ನು ಪ್ರೀತಿಸುವ ಶಕ್ತಿಯೂ ಇರುತ್ತದೆ. ವ್ಯಕ್ತಿಯೊಬ್ಬ ಸ್ವತಂತ್ರ ವ್ಯಕ್ತಿತ್ವವನ್ನು ಗಳಿಸಿದರೆ ಮಾತ್ರ ಪ್ರೀತಿಸುವ ಶಕ್ತಿ ಹುಟ್ಟುತ್ತದೆ. ಸ್ವತಂತ್ರ ವ್ಯಕ್ತಿತ್ವ ಎಂದರೆ ಕೇವಲ ಅಭಿಪ್ರಾಯಗಳನ್ನು ಪ್ರಖರವಾಗಿ ಮಂಡಿಸಬಲ್ಲ ವ್ಯಕ್ತಿಯಲ್ಲ. ತನ್ನೊಳಗಿನ ನೇತ್ಯಾತ್ಮಕ ಶಕ್ತಿಗಳ ಗುಲಾಮಗಿರಿಯಿಂದ ಪಾರಾಗಿರುವವನು ಎಂದು ಅರ್ಥ. ಇಂತಹ ಮನುಷ್ಯನಿಗೆ ಮಗುವಿನೊಡನೆ ಗಾಢವಾದ ಸಂಬಂಧವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಇದು ಬಹಳ ಕಷ್ಟಸಾಧ್ಯ ಎನ್ನುವ ಕಾರಣದಿಂದಲೇ ಆಸ್ಕರ್‌ವೈಲ್ಡ್ ಮಹಾಶಯ ಹೇಳುತ್ತಾನೆ **'ಕಲಿಯಲು ಯೋಗ್ಯವಾದ ಯಾವುದನ್ನೂ ಬೋಧಿಸಲು ಸಾಧ್ಯವಿಲ್ಲ'**. ನಿಜವಾದ ಶಿಕ್ಷಕನಲ್ಲಿ ಈ 'ಅಂತರ್ ಗ್ರಹಿಕೆ' ಇರುತ್ತದೆ. ಅವನಿಗೆ ಮಗುವಿನ ಮನದಾಳಕ್ಕಿಳಿದು ಅದರೊಡನೆ ಒಂದಾಗುವ ಕಲೆ ಗೊತ್ತಿದೆ. ಜೈನಧರ್ಮದಲ್ಲಿ ಇದನ್ನು 'ಮನಃ ಪರ್ಯಯ ಜ್ಞಾನ' ಎಂದು ವರ್ಣಿಸಲಾಗಿದೆ. ಅಂದರೆ ಇನ್ನೊಬ್ಬರ ಅಂತರಾಳಕ್ಕೆ ಇಳಿದು ವಿದ್ಯಮಾನವನ್ನು ಗ್ರಹಿಸಬಲ್ಲ ಶಕ್ತಿ.

ಮನುಷ್ಯರಿಗಾಗಿ ಯಂತ್ರಗಳಲ್ಲ, ಯಂತ್ರಗಳಿಗಾಗಿ ಮನುಷ್ಯರು!

ಕಂಪ್ಯೂಟರ್ ಯುಗದಲ್ಲಿ ಮಾಹಿತಿಯನ್ನು ನೆನಪಿನಲ್ಲೇ ಇಟ್ಟುಕೊಳ್ಳಬೇಕೆಂಬ ಅನಿವಾರ್ಯತೆಯೇನೂ ಇಲ್ಲ. ಕಂಪ್ಯೂಟರ್ ಬಳಸುವ ಕೌಶಲವೊಂದಿದ್ದರೆ ಎಲ್ಲ ಮಾಹಿತಿಯನ್ನು ಕ್ಷಣಾರ್ಧದಲ್ಲೇ ತರಿಸಿಕೊಳ್ಳಬಹುದು. ಎಂದರೆ ಮಾಹಿತಿಯ ಮೂಲಗಳನ್ನು ಅರಿತಿದ್ದರೆ ಸಾಕು. ಮಾಹಿತಿ-ಕೌಶಲಗಳು ಕೈವಶವಾದರೆ ಮನುಷ್ಯ ಪ್ರತಿಯೊಂದಕ್ಕೂ ಯಂತ್ರಗಳನ್ನು ಅವಲಂಬಿಸುತ್ತ ದುರ್ಬಲನಾಗುತ್ತಾನೆ. ಜೊತೆಗೆ ಹೆಚ್ಚು ಉತ್ಪಾದನೆಯ ಗೀಳು ಹಿಡಿಯುತ್ತದೆ. ಕೈಗಾರಿಕಾ ಯುಗದ ಮೊದಲ ದಿನಗಳಲ್ಲೇ ಈ ಆತಂಕ ಕಾಣಿಸಿಕೊಂಡಿತು. ಚಾರ್ಲಿ ಚಾಪ್ಲಿನ್ ತನ್ನ ಮಾಡರ್ನ್ ಟೈಮ್ಸ್ ಎಂಬ ಚಲನಚಿತ್ರದಲ್ಲಿ ಬೇಗ ಬೇಗ ಊಟ ಮಾಡಿಸುವ ಯಂತ್ರವೊಂದನ್ನು ತಂದು ಫ್ಯಾಕ್ಟರಿ ಕೆಲಸಗಾರರು ಸಮಯ ಉಳಿತಾಯ ಮಾಡಬಹುದೆಂಬ ಹಾಸ್ಯ ಪ್ರಸಂಗವನ್ನು ತೋರಿಸುತ್ತಾನೆ. ಹೀಗೆ ಉಳಿತಾಯ ಮಾಡಿದ ಸಮಯದಲ್ಲಿ ಮತ್ತಷ್ಟು ಉತ್ಪಾದನೆ ಮಾಡಬಹುದೆಂದು ಒಂದು ವಿಲಕ್ಷಣ ವಾದವನ್ನು ಮುಂದಿಡುವ ಯಂತ್ರಪರಿಣತ ಕೊನೆಗೆ ವಿಫಲನಾಗಿ ಹೊರಟುಹೋಗುತ್ತಾನೆ. ಹೆಚ್ಚು ಉತ್ಪಾದನೆಗಾಗಿ ಯಂತ್ರಗಳೇ ಪ್ರಧಾನವಾಗಿ ಮನುಷ್ಯನೇ ಕಳೆದುಹೋಗುತ್ತಿದ್ದಾನೆ. ಮನುಷ್ಯನಿಗಾಗಿ ಯಂತ್ರಗಳು ಎಂದು ಪ್ರಾರಂಭವಾಗಿ ಕೊನೆಗೆ ಯಂತ್ರಗಳಿಗಾಗಿ ಮನುಷ್ಯರು ಎನ್ನುವ ಹಂತ ತಲುಪುತ್ತಿದ್ದೇವೆ. 'ಟರ್ಮಿನೇಟರ್'ನಂತಹ ಇತ್ತೀಚಿನ ಸಿನಿಮಾದಲ್ಲಿ ಯಂತ್ರಗಳು ಎಂದರೆ ರೋಬೋಗಳು ಭಸ್ಮಾಸುರನಿಗೆ ಕೊಟ್ಟ ವರದಂತೆ ತಮ್ಮ ಜನಕ 'ಮನುಷ್ಯ'ನನ್ನು ನಿರ್ವಂಶ ಮಾಡಲು ಪ್ರಯತ್ನಿಸುವ ಒಂದು ವಿಲಕ್ಷಣ ಸ್ಥಿತಿಯನ್ನು ಚಿತ್ರಿಸಲಾಗಿದೆ. ಯಂತ್ರಗಳಿಗಿಂತ ಯಂತ್ರಗಳನ್ನು ತಯಾರು ಮಾಡುವ ಮನುಷ್ಯ ಮುಖ್ಯ ಎಂಬ ಸಂದೇಶವನ್ನು ಮಕ್ಕಳಿಗೆ ತಲುಪಿಸುವಲ್ಲಿ ನಮ್ಮ ಶಿಕ್ಷಣ ವಿಫಲವಾಗಿದೆ. ಇದು ಶಿಕ್ಷಣದ ದೊಡ್ಡ ದುರಂತ.

ಈ ಸಂದರ್ಭದಲ್ಲಿ ಶಿಕ್ಷಣ ಹಕ್ಕು ಕಾಯ್ದೆಯ ಪರಿಣಾಮವನ್ನು ಅರಿಯುವುದು ಮುಖ್ಯ. ಶಿಕ್ಷಣ ಹಕ್ಕು ಕಾಯ್ದೆ ಜಾಗತೀಕರಣ ಪ್ರಣೀತ ಶಿಕ್ಷಣವನ್ನಷ್ಟೇ ಸಾರ್ವತ್ರೀಕರಣಗೊಳಿಸುತ್ತಿದೆ. ಈ ಕಾಯ್ದೆ ಪರ್ಯಾಯ ಶಾಲೆಗಳಿಗೆ ಅವಕಾಶ ಕೊಡುವುದಿಲ್ಲ. ಶಿಕ್ಷಣದ ಎಲ್ಲ ಪ್ರಯೋಗಗಳನ್ನೂ ನಿಷೇಧಿಸುವ ಈ ಕಾಯ್ದೆ ಶಿಕ್ಷಣದ ಯಾವ ಹೊಸ ಸಾಧ್ಯತೆಗಳನ್ನೂ ಹುಡುಕದಂತೆ ನಿರ್ಬಂಧಿಸಿರುವುದು ಎಷ್ಟು ಸರಿ? ಈ ಕಾಯ್ದೆಯಿಂದಾಗಿ ಸಮಾನ ಶಾಲಾವ್ಯವಸ್ಥೆಯನ್ನೂ ಸಾಧಿಸಲಾಗಿಲ್ಲ. ಮುಚ್ಚುತ್ತಿರುವ ಸರ್ಕಾರಿ ಶಾಲೆಗಳ ನಡುವೆ ವ್ಯಾಪಾರಿ ಉದ್ದೇಶದ ಖಾಸಗಿ ಸಂಸ್ಥೆಗಳು ಶಾಲಾಶಿಕ್ಷಣವನ್ನು ಹಿಂದೆಂದಿಗಿಂತಲೂ ಹೆಚ್ಚಿನ ಲಾಭದಾಯಕ ಉದ್ಯಮವನ್ನಾಗಿ ಬೆಳೆಸುತ್ತಿವೆ.

ಯಂತ್ರ-ತಂತ್ರಜ್ಞಾನ ತಂದೊಡ್ಡುವ ಆತಂಕ

ಅತಿಯಾದ ತಂತ್ರಜ್ಞಾನ ಮನುಷ್ಯ ಸಂಬಂಧಗಳನ್ನು ಹದಗೆಡಿಸುತ್ತದೆ. ಮನುಷ್ಯನ ಮೋಸದ ಬುದ್ಧಿಗೆ ಪೂರಕವಾಗಿ ತಂತ್ರಜ್ಞಾನ ಕೆಲಸ ಮಾಡಬಹುದಾದ ಸಾಧ್ಯತೆಯಿದೆ. ಹಾಗಾಗಿ ಮೋಸಗಾರನೊಬ್ಬ ತನ್ನ ತಂತ್ರಜ್ಞಾನ ಪರಿಣತಿಯನ್ನು ಬೆಳೆಸಿಕೊಂಡು ಇತರರಿಗೆ ಮೋಸ ಮಾಡಿ ತಾನು ಸದಾ ಕಾಲವೂ ಲಾಭದಾಯಕ ಸ್ಥಾನದಲ್ಲಿ ಉಳಿದುಕೊಳ್ಳಬಹುದು. ಕುಟಿಲೋಪಾಯಗಳಿಂದ ತಂತ್ರಜ್ಞಾನವನ್ನು ಬಳಸಿ ಸರಳ ಮನುಷ್ಯರನ್ನು ಮೋಸಪಡಿಸಬಹುದು; ಹಾಗಾಗಿ ಈ ಮೊಸಕ್ಕೆ ಒಳಗಾಗದಂತೆ ತಮ್ಮನ್ನು ತಾವು ಕಾಪಾಡಿಕೊಳ್ಳುವುದೇ ಜನಸಾಮಾನ್ಯರಿಗೆ ಒಂದು ದೊಡ್ಡ ಸಾಹಸವಾಗಿಬಿಡುತ್ತದೆ. ನಾಗರಿಕತೆ ಮುಂದುವರಿದಂತೆಲ್ಲಾ ಮನುಷ್ಯರು ತಂತ್ರಜ್ಞಾನದ ಮೋಸದಿಂದ ಪಾರಾಗಲು, ದಾಖಲೆಗಳನ್ನು ರಕ್ಷಿಸಲು ಬಹಳ ಹೆಣಗಾಡಬೇಕಾಗುತ್ತದೆ. ಬಹುಶಃ ಈ ನಾವು ಯಾವ ಆನಂದದಿಂದ ಬದುಕು ಕಳೆಯುವ ಸಮಯಕ್ಕಿಂತ ಹೆಚ್ಚಾಗಿಯೇ ಇರಬಹುದೇನೋ? ಇಂದಿನ ಮೋಸದ ಆಟಗಳು ಹಿಂದಿನ ಅಕ್ಬರ್-ಬೀರಬಲ್ ಕಥೆಗಳಲ್ಲಿ ಕಂಡು ಬರುವ ಮೋಸದಾಟಗಳಷ್ಟು ಸರಳವಲ್ಲ. ಬೀರ್‌ಬಲ್ ತನ್ನ ಬುದ್ಧಿಶಕ್ತಿಯಿಂದ ಮೋಸಗಾರರ ಮೋಸವನ್ನು ಹೊರಗೆಡಹುತ್ತಿದ್ದ. ಆದರೆ ಇಂದಿನ ಪರಿಸ್ಥಿತಿಯೇ ಬೇರೆ. ಸತ್ಯವನ್ನು ಬಹಿರಂಗಪಡಿಸುವುದಕ್ಕಿಂತ ಸುಳ್ಳನ್ನು ಮುಚ್ಚಿಡುವುದರಲ್ಲಿ ತಂತ್ರಜ್ಞಾನ ಹೆಚ್ಚು ಶಕ್ತಿಶಾಲಿಯಾಗಿದೆ. ಏಕೆಂದರೆ ಈ ತಂತ್ರಜ್ಞಾನ ಬೆಳೆದುಬಂದಿರುವುದೇ ಅರ್ಧ ಸತ್ಯವನ್ನು ಹೇಳುವ ಮನಸ್ಸುಗಳ ನಡುವೆ. ಹಾಗಾಗಿ ಈ ತಂತ್ರಜ್ಞಾನದ ಉಪಯೋಗ ಸತ್ಯವನ್ನು ಬಚ್ಚಿಡುವವರಿಗೆ ಹೆಚ್ಚಾಗಿ ಆಗುತ್ತದೆಯೇ ಹೊರತು "ಸತ್ಯಕಾಗಿ ನಿಲುವ ಛಲವ ದೀಪ್ತಗೊಳಿಸು ಎನ್ನೊಳು" ಎಂದು ಅದು ಹೇಳುವುದೇ ಇಲ್ಲ.

ತಂತ್ರಜ್ಞಾನದ ನೆರಳಿನಲ್ಲಿ ಮೋಸ ಮಾಡುವುದನ್ನೇ ವೃತ್ತಿ ಮಾಡಿಕೊಂಡಿರುವ ವೃತ್ತಿಪರ ಮೋಸಗಾರರ ನಡುವೆ ನಾವು ಇರುವಾಗ ಮನುಷ್ಯ ಸಂಬಂಧಗಳು ಕೆಡದೆ ಏನು? ಪ್ರತಿ ನಿಮಿಷವೂ ಸರಳರಾದ ಜನ ತಾವು ಹೇಗೆ, ಯಾವಾಗ ಮೋಸ ಹೋಗಬಹುದೋ ಎಂಬ ಆತಂಕದಲ್ಲಿ ತೊಳಲಬೇಕಾದ ಪರಿಸ್ಥಿತಿ ಉಂಟಾಗಿದೆ. ಈ ಆತಂಕದಿಂದಾಗಿ ಎಲ್ಲರೂ ಉಳಿದ ಎಲ್ಲರನ್ನೂ ಅನುಮಾನ ದೃಷ್ಟಿಯಿಂದ ನೋಡುವಂತಾಗುತ್ತದೆ. 'ಯಾವ ಹುತ್ತದೊಳಗೆ ಯಾವ ಹಾವೋ' ಎಂದು ಭ್ರಮಿಸುತ್ತ ಎಲ್ಲರೂ ತಮಗೆ ಬೇಕಾದ ಸತ್ಯವನ್ನು ರುಜುವಾತುಪಡಿಸಲು ಅಗತ್ಯ ದಾಖಲೆಗಳನ್ನು ಸಂಗ್ರಹಿಸಿಟ್ಟುಕೊಂಡು ಕಾಪಾಡಿಕೊಳ್ಳಬೇಕಾಗುತ್ತದೆ. ಈ ತಂತ್ರಜ್ಞಾನ ಅವಲಂಬಿತ ಬದುಕು ಎಷ್ಟು ಜಟಿಲವಾಗುತ್ತ ಹೋಗುತ್ತದೆ ಎಂದರೆ ಮನುಷ್ಯ ಬದುಕುವುದಕ್ಕಿಂತ ಬದುಕಲು ಬೇಕಾದ ತಂತ್ರಜ್ಞಾನದ ಸಿದ್ಧತೆಗಳಲ್ಲೆ ಬದುಕನ್ನು ಕಳೆಯಬೇಕಾಗುತ್ತದೆ.

ಇಂತಹ ಒಂದು ಪರಿಸ್ಥಿತಿಯಲ್ಲಿ ಪ್ರೀತಿಯ ಸಂಬಂಧಗಳಿಗಿಂತ ವಸ್ತುಸಂಬಂಧಿ ದಾಖಲೆಗಳು ಬಹುಮುಖ್ಯವಾಗುತ್ತವೆ. ಪರಸ್ಪರ ನಂಬಿಕೆ, ವಿಶ್ವಾಸಗಳು ಕಾಣೆಯಾಗುತ್ತವೆ.

ತಾಯಿ–ಮಕ್ಕಳ ಸಂಬಂಧಗಳು ತಂದೆ–ಮಕ್ಕಳ ಸಂಬಂಧಗಳು ಅಷ್ಟೇ ಏಕೆ ಆತ್ಮೀಯ ಸ್ನೇಹಿತರ ಸಂಬಂಧಗಳೂ ಕೂಡ ವಿಷಸರ್ಪದ ಸಂಬಂಧವೋ ಎಂಬಂತೆ ಆತಂಕವನ್ನುಂಟುಮಾಡುತ್ತವೆ. ಅದರಲ್ಲೂ ವ್ಯಕ್ತಿಗಳು ಆರ್ಥಿಕವಾಗಿಯೋ ಅಧಿಕಾರದ ವಿಷಯದಲ್ಲೋ ಸಧೃಡರಾಗಿದ್ದಾರೆ ಎನ್ನುವುದಾದರೆ ಅವರ ಜೊತೆಗಿನ ಸಂಬಂಧಗಳು ತರಬಹುದಾದ ತೊಂದರೆಗಳಿಂದ ತಮ್ಮನ್ನು ತಾವು ಕಾಪಾಡಿಕೊಳ್ಳಲು ಶ್ರೀಸಾಮಾನ್ಯರು ಹೆಣಗಾಡಬೇಕಾಗುತ್ತದೆ. ತಂತ್ರಜ್ಞಾನದ ಸಾಧ್ಯತೆಗಳು ಈ ಆತಂಕಗಳನ್ನು ಹೆಚ್ಚಿಸುತ್ತಲೇ ಹೋಗುತ್ತವೆ.

ಹಣ ಅಧಿಕಾರಗಳಿಲ್ಲದ ಜನರೂ ಈ ಬಗೆಯ ಭಾವನಾಸರಣಿಗಳನ್ನು ತಮ್ಮ ತಮ್ಮ ಪರಿಮಿತಿಯಲ್ಲಿ ಅನುಕರಿಸಲು ಪ್ರಯತ್ನಿಸುತ್ತಾರೆ. ಕಳೆದುಕೊಳ್ಳುವಂತಹದು ಏನೂ ಇಲ್ಲದಿದ್ದರೂ 'ಸಮರ್ಥರು' ಅಂತಹ ಒಂದು ಆಟವನ್ನು ಆಡುವಾಗ ತಾವೇಕೆ ಅದರ ನಕಲಿ ಅನುಕರಣೆಯನ್ನಾದರೂ ಮಾಡಬಾರದು? ಹೀಗೆ ಬಲಾಢ್ಯವಾದದ್ದು ಯಾವಾಗಲೂ ಅನುಸರಣೀಯ ಎಂದು 'ನವಿಲುಪುಕ್ಕ ತೆರೆದುಕೊಂಡರೆ ಕೆಂಬೂತವು ತೆರೆದುಕೊಂಡಿತು' ಎಂಬಂತೆ ಬಡವರು ಈ ಜಾಡ್ಯವನ್ನು ಅನುಕರಿಸುತ್ತಾರೆ. ಹೀಗೆ ತಂತ್ರಜ್ಞಾನದ ಸಾಧ್ಯತೆಗಳು ಮನುಷ್ಯಸಂಬಂಧಗಳನ್ನು ನಿಷ್ಕಾರಣವಾಗಿ ಹದಗೆಡಿಸುತ್ತವೆ.

ಮನುಷ್ಯ ವಿವೇಕವನ್ನು ಗಳಿಸಿಕೊಂಡಾಗ ಮಾತ್ರ ಸರಳ ಬದುಕು ಸಾಧ್ಯವಾಗುತ್ತದೆ. ಅತಿಯಾದ ಮಾಹಿತಿತಂತ್ರಗಳಲ್ಲೇ ಲೋಲುಪರಾದ ಜನ ಉಪಕರಣಗಳ ಮೇಲೆ ಉಪಕರಣಗಳನ್ನು ಕೊಂಡು ಮಕ್ಕಳು ತಮ್ಮ ಆಟಿಕೆಗಳ ಜೊತೆಯಲ್ಲಿ ಆಟ ಆಡುವಂತೆ ಆಡುತ್ತಿದ್ದಾರೆ. ಒಂದು ವ್ಯತ್ಯಾಸವೆಂದರೆ ಈ ಬುದ್ಧಿವಂತರು ತಾವು ಬಳಸುತ್ತಿರುವ ಉಪಕರಣಗಳು ಹೇಗೆ ತಮ್ಮ ಸಮಯ ಉಳಿತಾಯ ಮಾಡುತ್ತಿವೆ, ಹೆಚ್ಚಿನ ನಿಖರತೆಯನ್ನು ತಂದುಕೊಡುತ್ತಿವೆ, ಹಣ ಉಳಿತಾಯ ಮಾಡುತ್ತಿವೆ ಹೀಗೆ ಅನೇಕ ವಾದಗಳನ್ನು ಮಂಡಿಸುತ್ತಾರೆ. ಅಪಕ್ವ ಮನಸ್ಸಿನ ಆಟವಾಡುವ ಆಸೆಗೆ ಉಪಕರಣಗಳನ್ನು ಒದಗಿಸಿ ಅದನ್ನು ಸಮರ್ಥಿಸುವ ಸರ್ಕಸ್‌ಗಳಲ್ಲಿ ತೊಡಗುತ್ತಾರೆ. ಇದೇ ಮನಸ್ಸು ಪಕ್ವವಾದಾಗ ಈ ಜನ ತಮ್ಮ ಈ ಬಗೆಯ ಸಮರ್ಥನೆಗಳನ್ನು ಕುರಿತು ತಾವೇ ನಗಬೇಕಾಗುತ್ತದೆ. ಯಾವ ಯಂತ್ರ, ಯಾವ ಉಪಕರಣ ತನಗೆ ಅಗತ್ಯ ಎಂಬುದನ್ನು ಒಬ್ಬ ಮನುಷ್ಯ ತನ್ನ ವಿವೇಕದ ಸಹಾಯದಿಂದ ತನಗೆ ತಾನೇ ನಿರ್ಧರಿಸಬೇಕು. ಒಂದು ವೇಳೆ ಈ ವಿವೇಕ ಹುಟ್ಟದೆ ಇದ್ದರೆ ಆಟವಾಡುತ್ತ ಕಾಲ ಕಳೆಯುವ ಆಸೆ ಹೋಗುವುದೇ ಇಲ್ಲ. ಕೆಲವು ಕೌಶಲಗಳು ಅದ್ಭುತವಾಗಿ ಕಂಡರೂ ಮೂಲಭೂತವಾಗಿ ಅವು ಬದುಕಿಗೆ ಯಾವುದೇ ರೀತಿಯಲ್ಲೂ ಸಂಬಂಧಿಸುವುದಿಲ್ಲ. ಇಂತಹ ಕೌಶಲಗಳ ಕುರಿತು ನಮ್ಮ ಪುರಾಣಗಳಲ್ಲೂ ಉಲ್ಲೇಖಗಳಿವೆ. ಉದಾಹರಣೆಗೆ ನಳಮಹಾರಾಜನ ಕತೆಯಲ್ಲಿ ಬರುವ ಋತುಪರ್ಣರಾಜ ಒಂದು ಮರದಲ್ಲಿ ಎಷ್ಟು ಎಲೆಗಳಿವೆ ಎಂಬುದನ್ನು ಮರ ನೋಡಿ ಕ್ಷಣಾರ್ಧದಲ್ಲಿ ಹೇಳಿಬಿಡುತ್ತಿದ್ದ. ಆದರೆ ಯಾವ ಮರದಲ್ಲಿ ಎಷ್ಟು ಎಲೆ ಇದೆ ಎಂಬುದನ್ನು ತಿಳಿದು

ಬದುಕಿಗೆ ಆಗಬೇಕಾದ್ದೇನು? ಹಾಗೆ ನೋಡಿದರೆ ವಾಯುವೇಗದಿಂದ ರಥ ನಡೆಸುವ ನಳಮಹಾರಾಜನ ಕೌಶಲ ಬದುಕಿಗೆ ಸಂಬಂಧಿಸಿದ್ದು. ಕೊನೆಯ ಪಕ್ಷ ನಮ್ಮ ಪ್ರಯಾಣವನ್ನು ಇದು ಸುಗಮಗೊಳಿಸುತ್ತದೆ. ಆದರೆ ಋತುಪರ್ಣರಾಜನ ಎಲೆ ಎಣಿಸುವ ವಿದ್ಯೆ ಅದ್ಭುತವಾದರೂ ಅದರಿಂದ ಉಪಯೋಗವೇನು? ಎಷ್ಟೋ ವೇಳೆ ಹೀಗೆ ಕೌಶಲಗಳನ್ನು ಪಡೆದ ನಂತರ ಅದರ ಉಪಯುಕ್ತತೆಯ ಬಗ್ಗೆ ಕಷ್ಟಪಟ್ಟು ಸಮರ್ಥನೆ ನೀಡುವ ಪ್ರಯತ್ನ ನಡೆಯುತ್ತದೆ.

ವಿನಾಶಕಾರಿ ಮನಸ್ಸು ಮತ್ತು ಶಿಕ್ಷಣ

ಕೇವಲ ಪುಸ್ತಕಜ್ಞಾನ ಹೆಚ್ಚಾದಂತೆ ಮನುಷ್ಯನ ವಿನಾಶಕಾರಿ ಶಕ್ತಿಯೂ ಹೆಚ್ಚುತ್ತಿದೆ. ಮಾರ್ಟಿನ್ ಲೂಥರ್ ಕಿಂಗ್ ಅವರ ಮಗ ಹೇಳುತ್ತಿದ್ದ ಮಾತು, 'Guided missiles in the hands of misguided people' ನಮ್ಮ ಪುಸ್ತಕಶಿಕ್ಷಣದ ಪರಿಣಾಮ! ನಾವು ಗಳಿಸುವ ಜ್ಞಾನ ನಮ್ಮನ್ನು ವಿನಾಶಕಾರಿಯಾಗಿ ಮಾಡುತ್ತಿರುವುದೇಕೆ? ಈ ಪುಸ್ತಕಜ್ಞಾನ ಮನುಷ್ಯನನ್ನು 'ಬಹುಜನ ಹಿತಾಯ ಬಹುಜನ ಸುಖಾಯ' ವಾಗಿ ಮಾಡುವುದಿಲ್ಲವೇಕೆ? ಈ ಸಂದರ್ಭದಲ್ಲಿ **ಈಶೋಪನಿಷತ್ತಿನ** ಮಾತು ನೆನಪಿಗೆ ಬರುತ್ತದೆ. ಅದರ ಒಂದು ಶ್ಲೋಕದ ಅರ್ಥ ಹೀಗಿದೆ. "ಯಾರು ಅವಿದ್ಯೆಯನ್ನು ಉಪಾಸನೆ ಮಾಡುವರೊ ಅವರು ಕುರುಡುಗತ್ತಲೆಯನ್ನು ಪ್ರವೇಶಿಸುವರು. ಯಾರು ವಿದ್ಯೆಯಲ್ಲೆ ನಿರತರಾಗಿರುವರೊ ಅವರು ಅದಕ್ಕಿಂತ ಹೆಚ್ಚಿನ ಕತ್ತಲೆಯನ್ನು ಪ್ರವೇಶಿಸುವರು". ಈ ಮಾತಿಗೆ ಇಂದಿನ ಸಂದರ್ಭದಲ್ಲಿ ಕೊಡಬಹುದಾದ ಒಂದು ವ್ಯಾವಹಾರಿಕ ವ್ಯಾಖ್ಯಾನವೆಂದರೆ ಯಾರು ಔಪಚಾರಿಕ ಶಿಕ್ಷಣವನ್ನು ಇನ್ನೂ ಪ್ರವೇಶಿಸಿಯೇ ಇಲ್ಲವೊ ಅವರು ಅಂಧಕಾರದಲ್ಲೇ ಇರುತ್ತಾರೆ. ಆದರೆ ಯಾರು ಔಪಚಾರಿಕ ಶಿಕ್ಷಣವನ್ನು ಪಡೆದಿರುತ್ತಾರೋ ಅವರು ಇದಕ್ಕಿಂತ ಹೆಚ್ಚಿನ ಕತ್ತಲೆಯಲ್ಲಿ ಮುಳುಗಿರುತ್ತಾರೆ! ಈ ಈರ್ವರಲ್ಲಿ ಎರಡನೆಯವರು ಹೆಚ್ಚು ಅಪಾಯಕಾರಿ. ಏಕೆಂದರೆ ಈ ಎರಡನೆಯ ಬಗೆಯ ಜನರು ವಿದ್ಯೆಯನ್ನು ಕಲಿತು ಸರಿ ತಪ್ಪುಗಳ ನಿಷ್ಕರ್ಷೆಯನ್ನು ಬಲ್ಲವರಾದರೂ ತಮ್ಮ ಕೃತಿಯಲ್ಲಿ ತಮಗೆ ಲಾಭದಾಯಕವಾದದ್ದನ್ನೇ ಮಾಡುತ್ತಾರೆ ಅಥವಾ ಸರಿಯಾದದ್ದು ತಮ್ಮ ಪ್ರವೃತ್ತಿಗೆ ಆಪ್ಯಾಯಮಾನವಾಗಿಲ್ಲ ಎಂಬ ಕಾರಣಕ್ಕೆ ಅದನ್ನು ಬಿಟ್ಟು ತಮಗೆ ಬೇಕಾದದ್ದನ್ನು ಎತ್ತಿಹಿಡಿಯುತ್ತಾರೆ. ಇದು ಪ್ರಾಮಾಣಿಕತೆಯ, ಆತ್ಮಸಾಕ್ಷಿಯ ಪ್ರಶ್ನೆ. ಔಪಚಾರಿಕ ಶಿಕ್ಷಣ ಈ ಆತ್ಮಸಾಕ್ಷಿಯನ್ನು ಎಚ್ಚರಿಸದಾಗಿದೆ. ಈ ದ್ವಂದ್ವವನ್ನು ಉಪನಿಷತ್ತುಗಳ ಕಾಲದಿಂದಲೂ ಗುರುತಿಸಲಾಗುತ್ತಿದೆ. ಮನಸ್ಸಿಗೆ ಸತ್ಯ ಗೋಚರಿಸಿದರೂ ಅದನ್ನು ಪಕ್ಕಕ್ಕೆ ತಳ್ಳಿ ತನ್ನ ಪಶುಪ್ರವೃತ್ತಿಗೆ ಪೂರಕವಾದದ್ದನ್ನು ಕಾರ್ಯಗತಗೊಳಿಸುವ ಮನಸ್ಸಿನ ಈ ಇಬ್ಬಂದಿತನ ಮನುಷ್ಯನ ಸತ್ಯನಿಷ್ಠೆ ಕಂಟಕವಾಗಿದೆ. ಆದ್ದರಿಂದ ಉಪನಿಷತ್ತುಗಳ ಕಾಲದಿಂದಲೂ ಈ ಬಗೆಯ ಮಾತುಗಳು ಮೂಡಿಬಂದಿವೆ. ಕೊನೆಗೆ ಇದರ

ಅರ್ಥವೇನೆಂದರೆ ಶಿಕ್ಷಣ–ಮಾಹಿತಿ ತಂತ್ರಜ್ಞಾನವನ್ನು ಪಡೆದವನು ಹೆಚ್ಚು ದುರುಳನಾಗುತ್ತಾನೆ. ಅದನ್ನು ಬಳಸಬೇಕಾದ ಕಡೆ ಬಳಸುವ ಬದಲು ತನಗೆ ಲಾಭವಾಗುವ ರೀತಿ ಬಳಸುತ್ತಾನೆ ಅಥವಾ ತನ್ನ ವಿಕೃತ ವಿಚ್ಛಿದ್ರಕಾರಿ ಮನಸ್ಸಿನ ಸಂತೃಪ್ತಿಗೆ ಈ ಜ್ಞಾನವನ್ನು ಬಳಸುತ್ತಾನೆ. ಸಮೂಹದ ಕಗ್ಗೊಲೆಗೆ ತಯಾರಾಗುವ ಕ್ಷಿಪಣಿಗಳು ಹುಟ್ಟುವುದು ಈ ಬಗೆಯ ಜ್ಞಾನದಿಂದಲೇ. ಇದು ದೇಶಪ್ರೇಮದ ರೂಪವನ್ನೂ ತೊಡುತ್ತದೆ. ಗಾಂಧಿಯಂತಹ ವ್ಯಕ್ತಿ ಹುಟ್ಟಿದ ನಮ್ಮ ದೇಶದಲ್ಲಿ ಭಾರತರತ್ನ ಪ್ರಶಸ್ತಿಗಳು ಧಾರಾಳವಾಗಿ ಸಿಕ್ಕಿರುವುದು ಈ ಬಗೆಯ ಜ್ಞಾನಕ್ಕೆ ಎಂಬುದನ್ನು ನಾವು ಗಮನಿಸಬೇಕು. ಇಡೀ ಜಗತ್ತಿಗೆ ಅಹಿಂಸೆಯ ಮಾರ್ಗದರ್ಶನ ಮಾಡುತ್ತಿರುವ ನಾವು ಹಿಂಸಾತ್ಮಕ ಸಂಶೋಧನೆಗಳನ್ನು ಮನಸಾರೆ ಮೆಚ್ಚುತ್ತಿರುವುದು ಏನನ್ನು ಸೂಚಿಸುತ್ತದೆ? ಐನ್‌ಸ್ಟೈನ್ ಅವರು ತಮ್ಮ ಸಂಶೋಧನೆಯ ಪರಿಣಾಮವಾಗಿ ಹಿರೋಶಿಮಾ ನಾಗಸಾಕಿಯ ಮೇಲೆ ಬಾಂಬ್ ಬಿದ್ದಾಗ ಬಹಳವಾಗಿ ಪರಿತಪಿಸಿದರು. ಬಹುಶಃ ಅವರಿಗೆ ತಮ್ಮ ಸಂಶೋಧನೆ ಇಂತಹ ಪರಿಣಾಮವನ್ನುಂಟುಮಾಡುತ್ತದೆ ಎಂದು ತಿಳಿದಿದ್ದರೆ ಆ ಜ್ಞಾನವನ್ನು ಅವರು ಪ್ರಕಟಿಸುತ್ತಲೇ ಇರಲಿಲ್ಲವೋ ಏನೊ. ಕ್ಲೋನಿಂಗ್ ಟೆಕ್ನಾಲಜಿಯ ಬಗ್ಗೆ ಅಥವಾ ಬಯೋಟೆಕ್ನಾಲಜಿಯ ಬಗ್ಗೆ ಈಗ ಸುದ್ದಿಯಲ್ಲಿರುವ ತಕರಾರುಗಳು ಈ ಜ್ಞಾನದ ದುಷ್ಪರಿಣಾಮಗಳ ಬಗ್ಗೆ ಜನ ಭಯಭೀತರಾಗಿರುವುದನ್ನು ಸೂಚಿಸುತ್ತದೆ. ಆದರೆ ಈ ಜ್ಞಾನವನ್ನು ಹುಡುಕಿ ಆಳದಿಂದ ಹೆಕ್ಕಿ ತೆಗೆಯುತ್ತಿರುವ ಸಂಶೋಧಕರು ಇದರ ಪರಿಣಾಮಗಳ ಕುರಿತು ಆಲೋಚಿಸುತ್ತಲೇ ಇಲ್ಲ. ಅವರ ಕಣ್ಣೆಲ್ಲ ಸಂಶೋಧನೆಗಳನ್ನು ಪ್ರಕಟಿಸಿ ಪಡೆಯಬಹುದಾದ ಪ್ರಸಿದ್ಧಿ–ಪ್ರಶಸ್ತಿಗಳ ಕಡೆಗೇ ಇರುತ್ತದೆ.

ಈ ಸಂದರ್ಭದಲ್ಲಿ ಸ್ವಾಮಿಗಳೊಬ್ಬರು ಹೇಳಿದ ಒಂದು ಬಹಳ ಹಳೆಯ ಘಟನೆಯ ನೆನಪಾಗುತ್ತದೆ. ವಿದ್ಯಾವಂತನೊಬ್ಬ ಸಣ್ಣ ನೀರಿನ ಕೊಳದ ಮೇಲೆ ಚಾಚಿಕೊಂಡಿದ್ದ ಜಾಲಿಮರದ ಕೊಂಬೆಯಲ್ಲಿ ನೇತಾಡುತ್ತಿದ್ದ ಗೀಜಗನ ಗೂಡು ಕಂಡು ಆಕರ್ಷಿತನಾದ. ಅಲ್ಲೇ ಇದ್ದ ಕುರಿ ಕಾಯುವ ಕುರುಬನೊಬ್ಬನನ್ನು 'ಆ ಗೀಜಗನ ಗೂಡು ಕಿತ್ತುಕೊಡು. ನಿನಗೆ ಹತ್ತು ರೂಪಾಯಿ ಕೊಡುತ್ತೇನೆ' ಎಂದ. ಆ ಕುರುಬ 'ಸಾಧ್ಯವಿಲ್ಲ' ಎಂದ. ಈ ವಿದ್ಯಾವಂತ ಹೇಳಿದ 'ಇಪ್ಪತ್ತು ರೂಪಾಯಿ ಕೊಡುತ್ತೇನೆ ಕಿತ್ತುಕೊಡು'. ಆ ಕುರುಬ 'ಇಲ್ಲ ಸ್ವಾಮಿ' ಎಂದ. ಎಷ್ಟು ದುರಾಸೆ ಈ ಕುರುಬನಿಗೆ ಎಂದು ವಿದ್ಯಾವಂತನಿಗೆ ಕೋಪ ಬಂತು. 'ಹಾಗಾದರೆ ಎಷ್ಟು ದುಡ್ಡು ಕೊಟ್ಟರೆ ನೀನು ಕಿತ್ತು ಕೊಡುತ್ತೀಯ?' ಎಂದು ವ್ಯಂಗ್ಯವಾಗಿ ಕೇಳಿದ. ಆಗ ಕುರುಬ ಹೇಳಿದ, 'ಸ್ವಾಮಿ ನೀವು ಎಷ್ಟು ದುಡ್ಡು ಕೊಟ್ಟರೂ ಆ ಗೂಡನ್ನು ಕಿತ್ತುಕೊಡುವುದಿಲ್ಲ. ಅದರಲ್ಲಿ ಮರಿಗಳಿವೆ. ಅದರ ತಾಯಿ ತನ್ನ ಮರಿಗಳಿಗೆ ಆಹಾರ ತರಲು ಹೋಗಿದೆ'.

ಇದೊಂದು ಸರಳೀಕರಿಸಿದ ಕಥೆ ಎನ್ನಬಹುದು. ಇಂದು ಹಣ ಕೊಟ್ಟರೂ ಹಕ್ಕಿಯ ಮರಿಗಳಿಗಾಗಿ ಹಣ ತ್ಯಾಗ ಮಾಡುವ ಕುರುಬರು ಕಾಣುತ್ತಾರೆಯೇ ಎಂಬುದು ಪ್ರಶ್ನೆ.

ಕಾಲ ಬದಲಾದಂತೆ ವಿದ್ಯಾವಂತರಾಗಲೀ-ಅವಿದ್ಯಾವಂತರಾಗಲೀ ಪ್ರಕೃತಿಯ ಬಗ್ಗೆ, ಜೀವಜಂತುಗಳ ಬಗ್ಗೆ ಸೂಕ್ಷ್ಮ ಸಂವೇದನಾಶೀಲತೆಯನ್ನು ಉಳಿಸಿಕೊಂಡಿಲ್ಲ. ಅಥವಾ ಇಂದು ನಮ್ಮ ನಡುವೆ ಈ ಬಗೆಯ ಸಂವೇದನಾಶೀಲತೆಯನ್ನು ಉಳಿಸಿಕೊಂಡಿರುವವರಲ್ಲಿ ವಿದ್ಯಾವಂತರೂ ಇದ್ದಾರೆ, ಅವಿದ್ಯಾವಂತರೂ ಇದ್ದಾರೆ. ಇಲ್ಲಿ ನಮ್ಮನ್ನು ಕಾಡುವ ಪ್ರಶ್ನೆ ಎಂದರೆ ಒಂದೇ ಬಗೆಯ ಶಿಕ್ಷಣ ಪಡೆದು ಒಂದೇ ಬಗೆಯ ಪರಿಸರದಲ್ಲಿ ಇದ್ದರೂ ಈ ಕೆಲವರು ತಮ್ಮ ಸಂವೇದನಾಶೀಲತೆಯನ್ನು ಹೇಗೆ ಉಳಿಸಿಕೊಳ್ಳಲು ಸಾಧ್ಯವಾಯಿತು? ಇದೊಂದು ಹುಟ್ಟುಗುಣ ಎನ್ನಬೇಕೆ? ಒಂದು ವೇಳೆ ಹುಟ್ಟುಗುಣವಷ್ಟೇ ಈ ಶೀಲವನ್ನು ಮನುಷ್ಯನಲ್ಲಿ ರೂಪಿಸುವುದಾದರೆ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರವೇನು? ಅಥವಾ ನಮ್ಮ ಸುತ್ತಮುತ್ತ ಇರುವ ನಮ್ಮ ಹೆಮ್ಮೆಯ ಸಂಸ್ಕೃತಿಯ ಪಾತ್ರವೇನು?

ಈ ಸಂದರ್ಭದಲ್ಲಿ **ಸೊಂಡಿಲು ಇಲ್ಲದ ಆನೆಯ ಘಟನೆ** ನೆನಪಾಗುತ್ತದೆ. ಜೀನ್ ಪಿಯರಿ ಹ್ಯಾಲೆಟ್ ಎಂಬ ವಿಜ್ಞಾನಿ ಆನೆಗಳನ್ನು ಅಧ್ಯಯನ ಮಾಡುತ್ತಿದ್ದ. ಒಂದು ಗುಂಪಿನಲ್ಲಿ ಸೊಂಡಿಲಿಲ್ಲದ ಆನೆಯೊಂದು ಕಂಡುಬಂತು. ಬಹುಶಃ ಅಪಘಾತದಲ್ಲಿ ಈ ಆನೆ ಸೊಂಡಿಲು ಕಳೆದುಕೊಂಡಿತ್ತು. ಆದರೆ ಈ ಆನೆ ಹೇಗೆ ಹುಲ್ಲು ತಿನ್ನುತ್ತದೆ ಎಂದು ಕುತೂಹಲದಿಂದ ಆನೆಗಳ ಗುಂಪನ್ನೇ ಹಿಂಬಾಲಿಸಿ ಹೋದ. ಸಾಕಷ್ಟು ಹುಲ್ಲು ಬೆಳದಿದ್ದ ಸ್ಥಳಕ್ಕೆ ಈ ಆನೆಗಳಲ್ಲ ತಲುಪಿದವು. ನೋಡುತ್ತಾನೆ- ಎಲ್ಲಾ ಆನೆಗಳು ಪೈಪೋಟಿಯಿಂದ ಸೊಂಡಿಲಿಲ್ಲದ ಆನೆಗೆ ಹುಲ್ಲು ತಿನ್ನಿಸತೊಡಗಿದವು. ಸೊಂಡಿಲಿಲ್ಲದ ಆನೆ ಹೊಟ್ಟೆ ತುಂಬ ಹುಲ್ಲು ತಿಂದಿತು. ಈ ಘಟನೆಯಿಂದ ಪರಸ್ಪರ ಸಹಕರಿಸುವ ಹುಟ್ಟರಿವು ಎಲ್ಲ ಪ್ರಾಣಿಗಳಲ್ಲೂ ಇರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಇದು ಬದುಕಿಗೆಬೇಕಾದ ಒಂದು ಸಾವಯುವ ಅರಿವು. ಆದರೆ ನಮ್ಮ ಶಿಕ್ಷಣ ಈ ಅರಿವನ್ನು ಉಳಿಸಲು ಸಹಕಾರಿಯಾಗಿಲ್ಲ.

ಪ್ರಕೃತಿಯ ಬಗೆಗಿನ ಕಾಳಜಿ, ಪರಸ್ಪರ ಸಹಕಾರ, ಸಹಾನುಭೂತಿ ಇವೆಲ್ಲ ಬದುಕಿನ ಸಹಜ ಶೀಲಗಳು. ಈ ಬಗೆಯ ಶೀಲನಿರ್ಮಾಣಕ್ಕೆ ಬೇಕಾದ ಆನುವಂಶೀಯ ಗುಣಗಳು ಎಲ್ಲರಲ್ಲೂ ಇವೆ. ಅದು ಸೂಕ್ತವಾಗಿ ವಿಕಾಸವಾಗಲು ಅನುಸರಣೀಯ ಮಾದರಿಗಳು, ಉತ್ತಮ ಪರಿಸರ ಎರಡೂ ಬೇಕು. ಜೀವಂತ ಮಾದರಿಗಳ ಅಭಾವದಲ್ಲಿ ನಾವು ಪಡೆದ ಶಿಕ್ಷಣ ನಮ್ಮನ್ನು ಮತ್ತಷ್ಟು ವಿಚ್ಛಿದ್ರಕಾರಿಯಾಗಿ ಮಾಡುತ್ತದೆ. ಯಾವ ಭಾವನಾ ಸಮುಚ್ಚಯುಗಳಿಗೆ ಮನ್ನಣೆ ಆದರಗಳು ನಮ್ಮ ಸಮಾಜದಲ್ಲಿ ದೊರೆಯುತ್ತವೆಯೊ ಆ ಭಾವನಾ ಸಮುಚ್ಚಯುಗಳು ಮಕ್ಕಳ ಮನಸ್ಸಿನಲ್ಲಿ ಆಳವಾಗಿ ಬೇರೂರುತ್ತವೆ. ಆದ್ದರಿಂದ ವಿಕೃತ ಸಾಮಾಜಿಕ ಪರಿಸರದಲ್ಲಿ ಈ ಬಗೆಯ ಭಾವನೆಗಳಿಗೇ ಆದ್ಯತೆ ನೀಡುವ ಶಿಕ್ಷಣದ ಪರಿಣಾಮ ಮತ್ತಷ್ಟು ವಿಚ್ಛಿದ್ರಕಾರಿಯಾಗಿ ಇರಬಲ್ಲದು. ಆದ್ದರಿಂದ ಬಡವನಾಗಲೀ-ಬಲ್ಲಿದನಾಗಲೀ, ವಿದ್ಯಾವಂತನಾಗಲೀ-ನಿರಕ್ಷರಕುಕ್ಷಿಯಾಗಲೀ

ಒಟ್ಟಾರೆಯಾಗಿ ಪ್ರಕೃತಿಯ ಬಗ್ಗೆ, ತನ್ನ ನೆರೆಹೊರೆಯವರ ಬಗ್ಗೆ, ಸುತ್ತಮುತ್ತಲಿನ ಜೀವಜಂತುಗಳ ಬಗ್ಗೆ ಇರಬೇಕಾದ ಸಂವೇದನಾಶೀಲತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಇದು ಕೇವಲ ಬೌದ್ಧಿಕ ಅರಿವಿಗೆ ಸಂಬಂಧಿಸಿದ್ದಲ್ಲ. ಏಕೆಂದರೆ ಬೌದ್ಧಿಕವಾಗಿ ಎಲ್ಲರೂ ಸಂವೇದನಾಶೀಲತೆಯನ್ನು ಉಳಿಸಿಕೊಳ್ಳುವ ಮತ್ತು ಪ್ರಕೃತಿಯನ್ನು ಕಾಪಾಡುವ ಮಾತನಾಡುತ್ತಾರೆ. ಆದರೆ ಪರಿಣಾಮದಲ್ಲಿ ಮಾತ್ರ ಪ್ರಕೃತಿಯನ್ನು ವಿನಾಶ ಮಾಡುತ್ತಾರೆ. ಇದು ನಮ್ಮ ಅರ್ಥಕೇಂದ್ರಿತ ಔಪಚಾರಿಕ ಶಿಕ್ಷಣದ ಪರಿಣಾಮ.

ಹಾಗಾದರೆ ನಮ್ಮ ನಡವಳಿಕೆಯನ್ನು ಬದಲಿಸಬಲ್ಲ ಅಂಶ ಯಾವುದು? ನಿಶ್ಚಯವಾಗಿ ಹೇಳಬೇಕೆಂದರೆ ಮನುಷ್ಯನ ಭಾವನಾ ಸಮುಚ್ಚಯಗಳನ್ನು ರೂಪಿಸುವ ದೈನಂದಿನ ಅಭ್ಯಾಸಗಳು. ಎಂದರೆ ಬಾಲ್ಯದಲ್ಲಿ ತೀವ್ರವಾಗಿ ಪರಿಣಾಮ ಬೀರಿದ ಜೀವಂತ ಮಾದರಿಗಳು ಮನುಷ್ಯನ ಅಭ್ಯಾಸಕ್ಕೆ ಎಂದರೆ ಅಪ್ರಜ್ಞಾಪೂರ್ವಕ ನಡವಳಿಕೆಗೆ ಬುನಾದಿಯಾಗಿವೆ. ವಾಸ್ತವವಾಗಿ ಮನುಷ್ಯನ ಬಹುತೇಕ ನಡವಳಿಕೆಗಳು ಅಪ್ರಜ್ಞಾ ಪೂರ್ವಕ ಸ್ತರದಿಂದ ಹೊಮ್ಮಿದ ನಡವಳಿಕೆಗಳು. ಒಬ್ಬ ಮನುಷ್ಯ ಒಳ್ಳೆಯವನಾಗಿರುವುದು ಅವನಿಗೆ ಕೆಟ್ಟವನಾಗಲು ಸಾಧ್ಯವಾಗದೇ ಇರುವುದರಿಂದ. ಅಥವಾ ಕೆಟ್ಟವನಾಗಿರುವುದೂ ಕೂಡ ಇದೇ ಬಗೆಯ ಅನಿವಾರ್ಯತೆಯಿಂದ. ಇದಕ್ಕೆ ಕಾರಣ ಮನದಾಳದಲ್ಲಿ ಬೇರೂರಿರುವ ಅಭ್ಯಾಸಗಳು. ಈಗ ನಮ್ಮ ಮುಂದೆ ಇರುವ ಸವಾಲು ಎಂದರೆ **ನಾವು ನಮ್ಮ ಬೌದ್ಧಿಕ ಶಕ್ತಿಯಿಂದ ಪಡೆದ ಜ್ಞಾನವನ್ನು ನಮ್ಮ ಮುಂದಿನ ಪೀಳಿಗೆಗೆ ಅಭ್ಯಾಸದ ಮಾದರಿಗಳಾಗಿ ಕೊಡಲು ಸಾಧ್ಯವೆ?** ಇಂತಹ ಒಂದು ಜ್ಞಾನ ವರ್ಗಾವಣೆಯ ತಂತ್ರವನ್ನು ನಾವು ಶಿಕ್ಷಣದ ಮೂಲಕ ರೂಪಿಸಬಹುದೆ? ಒಳ್ಳೆಯ ನಡವಳಿಕೆಗಳ ಅಭ್ಯಾಸಗಳು ಮನದಾಳದಲ್ಲಿ ಬೇರೂರಿದ ಮೇಲೆ ಅದರ ಬೌದ್ಧಿಕ ಆಯಾಮಗಳನ್ನು, ಆ ಸಂಬಂಧವಾದ ವೈಚಾರಿಕತೆಯನ್ನು ಮಕ್ಕಳು ಬೆಳೆಸಿಕೊಳ್ಳಬಹುದು. ಅಥವಾ ಈ ಅಭ್ಯಾಸಗಳ ನಡುವೆ ಬೆಳೆದ ದೊಡ್ಡವರೂ ಬೆಳೆಸಿಕೊಳ್ಳಬಹುದು. ಇದು ಬಹುಮುಖ್ಯವಾದ ಪ್ರಶ್ನೆ. ಏಕೆಂದರೆ ವೈಚಾರಿಕತೆಯ ಮೂಲಕ ಸಾಧಿಸಿದ ನಿಷ್ಕರ್ಷೆ ಕೃತಿಯಲ್ಲಿ ಮೂಡದೇ ಇರುವುದನ್ನು ನಾವು ನೋಡುತ್ತಿದ್ದೇವೆ. ಒಂದು ವೇಳೆ ವೈಚಾರಿಕತೆಯನ್ನು ಸಂಪೂರ್ಣವಾಗಿ ಕೈಬಿಟ್ಟು ಕೇವಲ ಅಪ್ರಜ್ಞಾಪೂರ್ವಕವಾದ ನಡವಳಿಕೆಯನ್ನು ಅವಲಂಬಿಸಿದರೆ ಅದೂ ನಮ್ಮನ್ನು ಮತ್ತಷ್ಟು ಅವಿವೇಕಕ್ಕೆ ಕೊಂಡೊಯ್ಯಬಹುದು. ಆದ್ದರಿಂದ ಮನುಷ್ಯನ ಮೂಲಭೂತ ವ್ಯಕ್ತಿತ್ವ ರೂಪುಗೊಳ್ಳುವಾಗ ಮೌಲ್ಯಗಳ ಆಧಾರದ ಮೇಲೆ ಅಭ್ಯಾಸಗಳನ್ನು ರಕ್ತಗತ ಮಾಡಿಕೊಂಡು ಆನಂತರ ವೈಚಾರಿಕ ಆಯಾಮವನ್ನು ಪ್ರವೇಶಿಸುವುದು ಮತ್ತು ಈ ವೈಚಾರಿಕ ಶಕ್ತಿಯನ್ನು ಪ್ರಬುದ್ಧವಾಗಿ ಬೆಳೆಸಿಕೊಂಡಮೇಲೆ ಅಸಂಬದ್ಧವಾದ ಅಭ್ಯಾಸಗಳು ಕಂಡುಬಂದಲ್ಲಿ ಅವುಗಳಿಂದ ಬಿಡುಗಡೆ ಪಡೆಯಬಹುದು. ಅಥವಾ ಅಂತಹ ಅಭ್ಯಾಸಾಧಾರಿತ ನಡವಳಿಕೆಗಳು ಸಮಾಜಕಂಟಕವಾಗದಂತೆ ವೈಚಾರಿಕ ಶಕ್ತಿಯಿಂದ ತಡೆಗಟ್ಟಬಹುದು. ಮೊದಲನೆಯದಾಗಿ 'ಮನಸ್ಸು ಪಕ್ವವಾಗುತ್ತದೆ, ವಿವೇಕವನ್ನು

ಗಳಿಸುತ್ತದೆ' ಎಂಬ ಅಂಶವನ್ನಾದರೂ ನಮ್ಮ ಶಿಕ್ಷಣ ಪದ್ಧತಿ ಗುರುತಿಸಬೇಕು. ಮಾಹಿತಿ ಕೊಡುವುದಷ್ಟೇ ಶಿಕ್ಷಣದ ಕೆಲಸ ಎಂದು ಭಾವಿಸಿರುವಾಗ ವಿವೇಕಕ್ಕೆ ಸ್ಥಾನವೆಲ್ಲಿದೆ?

ಹಿಂಸೆ ಮತ್ತು ಯಂತ್ರ-ಶಸ್ತ್ರಗಳು

ಕೆಲವರು ಹೇಳುವಂತೆ ನಮ್ಮ ಮಾಹಿತಿ ತಂತ್ರಜ್ಞಾನ, ತಾಂತ್ರಿಕ ಪ್ರಗತಿ ಒಳ್ಳೆಯದು ಕೆಟ್ಟದ್ದು ಎಂಬ ಯಾವ ಭೇದವೂ ಇಲ್ಲದೆ ಬಳಕೆಯಾಗುತ್ತಿದೆ. ಎಲ್ಲದಕ್ಕೂ ಈವರೆಗೆ ಉತ್ಪತ್ತಿಯಾಗಿರುವ ಯಂತ್ರಗಳೆಲ್ಲವೂ ವಿಧ್ವಂಸಕಕಾರಿಯಲ್ಲ. ಅವು ಮಾನವಕಲ್ಯಾಣಕ್ಕೆ ಬಳಕೆಯಾಗುತ್ತಿರುವುದೂ ನಿಜ. ಆದರೆ ಅಣುಬಾಂಬಿನಂತಹ ವಿಧ್ವಂಸಕಕಾರಿ ಅಸ್ತ್ರಗಳ ತಯಾರಿಕೆ ಮತ್ತು ಬಳಕೆಯಲ್ಲಿ ಮನುಷ್ಯನು ತೊಡಗದಂತೆ ತಡೆಯುವ ಶಕ್ತಿ ಮಾಹಿತಿ ತಂತ್ರಜ್ಞಾನಕ್ಕಿದೆಯೋ ಅಥವಾ ವಿವೇಕಕ್ಕಿದೆಯೋ ಎಂಬುದು ಪ್ರಮುಖವಾದ ಪ್ರಶ್ನೆ.

ಇಂದು ಭೂಮಿಯ ಮೇಲೆ ಮೂವತ್ತಾರು ಸಾವಿರ ಅಣುಬಾಂಬ್‌ಗಳನ್ನು ತಯಾರಿಸಿ ಶೇಖರಿಸಿಡಲಾಗಿದೆ. ಈ ಒಂದೊಂದು ಬಾಂಬ್ ಹಿರೋಶಿಮಾ-ನಾಗಾಸಾಕಿ ಮೇಲೆ ಹಾಕಿದ ಅಣುಬಾಂಬಿಗಿಂತ 2700 ಪಟ್ಟು ಶಕ್ತಿಶಾಲಿ. ನಾವು ಮಾನವಕಲ್ಯಾಣಕ್ಕಾಗಿ ಎಷ್ಟು ಯಂತ್ರಗಳನ್ನು ತಯಾರಿಸಿದರೇನು? ಒಂದೋ ಎರಡೋ ಅಣುಬಾಂಬ್‌ಗಳನ್ನು ಸಿಡಿಸಿದರೂ ಸರ್ವನಾಶವಾದೀತು. ಇಲ್ಲಿ ಪ್ರಶ್ನೆಯೇನೆಂದರೆ ಮಾನವಕಲ್ಯಾಣವನ್ನು ಬಾಯಲ್ಲಿ ಪಠಿಸುತ್ತಿದ್ದರೂ ಯಂತ್ರತಯಾರಕರ ಗಮನವೆಲ್ಲ ಯಂತ್ರಗಳಿಂದ ಗಳಿಸಬಹುದಾದ ಹಣದ ಕಡೆ. ಯಂತ್ರ ತಯಾರಕರು ತಯಾರಿಸುವ ಯಂತ್ರಗಳಿಗೆ ಬೇಡಿಕೆಯಿದೆ ಎಂಬ ಕಾರಣಕ್ಕಾಗಿ ಯಂತ್ರ ತಯಾರಾಗುತ್ತದೆ. ಶ್ರೀಮಂತ ಭಯೋತ್ಪಾದಕನೊಬ್ಬ ಹಣ ನೀಡಿದರೆ ಇದೇ ಯಂತ್ರ ತಯಾರಕರು ಸಮೂಹ ಕಗ್ಗೊಲೆ ಮಾಡಬಲ್ಲ ಯಂತ್ರಗಳನ್ನು ತಯಾರು ಮಾಡಿಕೊಡುತ್ತಾರೆ. ಲಾಯರ್, ಇಂಜಿನಿಯರ್, ಡಾಕ್ಟರ್ ಮೊದಲಾದವರೆಲ್ಲ ಇದು 'ಸತ್ಯ', ಇದು 'ಬಹುಜನರ ಹಿತ' ಎಂದು ಭಾವಿಸುತ್ತ ಕೆಲಸ ಮಾಡುತ್ತಾರೇನು? ಪರಿಣತಿ-ಕೌಶಲದಂತಹ ಮೌಲ್ಯಗಳು ಮಾತ್ರ ಇವರಿಗೆ ಗಳಿಸಬೇಕಾದ ಮೌಲ್ಯಗಳು ಎಂದು ತೋರುತ್ತವೆ. ಸತ್ಯ ಅಹಿಂಸೆಗಳು ಇವರಿಗೆ ಪಳೆಯುಳಿಕೆ ಮೌಲ್ಯಗಳಾಗಿ ಕಾಣುತ್ತವೆ. ಈ ಸಂದರ್ಭದಲ್ಲಿ ರಾಮಾಯಣದಲ್ಲಿ ಸೀತೆ ರಾಮನಿಗೆ ಬುದ್ಧಿ ಹೇಳಿದ ಪ್ರಸಂಗವೊಂದು ನೆನಪಿಗೆ ಬರುತ್ತದೆ. ಇಲ್ಲಿ ಮೌಲ್ಯಗ್ರಹಿಕೆಯ ಸಂದರ್ಭದಲ್ಲಿ ಸೀತೆ - ರಾಮರ ಸಂವಾದ ಮುಕ್ತವಾಗಿದೆ, ಲಿಂಗತಾರತಮ್ಯವಿಲ್ಲದೆ ಸಮತೋಲನದಲ್ಲಿದೆ ಎಂಬುದನ್ನು ಗಮನಿಸಬೇಕು. ಜೊತೆಗೆ ಸರಿ-ತಪ್ಪುಗಳ ಆಯ್ಕೆಯಲ್ಲಿ ಯುಕ್ತಾಯುಕ್ತ ವಿವೇಚನೆ ಹೇಗೆ ಕೇವಲ ಔಪಚಾರಿಕ ಜ್ಞಾನಕ್ಕೆ ಸಂಬಂಧಿಸಿಲ್ಲ, ಅದನ್ನು ಮೀರಿದ ಒಂದು ವಿವೇಕ ಅಲ್ಲಿ ಕೆಲಸಮಾಡುತ್ತಿದೆ ಎಂಬುದನ್ನೂ ಗಮನಿಸಬಹುದು. ಬಹುತಃ ಗುರುಕುಲ ಪದ್ಧತಿಯ ಶಿಕ್ಷಣದಲ್ಲಿ ಈ

ಬಗೆಯ ಜ್ಞಾನದ ಬೆಳವಣಿಗೆಗೆ ಹೆಚ್ಚು ಒತ್ತುಕೊಡುತ್ತಿದ್ದರು ಎಂದು ಕಾಣುತ್ತದೆ. ಆದರೆ ಜಾತಿಆಧಾರಿತ ಅಧಿಕಾರಿಭೇದ ಸಮಾನತೆಯ ಮೌಲ್ಯಕ್ಕೆ ಹೊಂದಿಕೊಳ್ಳುವುದಿಲ್ಲ ಎಂಬುದೂ ಸತ್ಯ.

ರಾಮನಿಗೆ ಸೀತೆಯ ಬುದ್ಧಿವಾದ

ಪಿತೃವಾಕ್ಯ ಪರಿಪಾಲನೆಗಾಗಿ ರಾಮ, ಲಕ್ಷ್ಮಣ, ಸೀತೆ ಮೂವರೂ ಹದಿನಾಲ್ಕು ವರ್ಷ ವನವಾಸ ಮಾಡುತ್ತಿದ್ದರು. ಆ ಸಮಯದಲ್ಲಿ ರಾಮನು ಅನೇಕ ರಾಕ್ಷಸರನ್ನು ಕೊಂದುಹಾಕಿದ. ಆ ರಾಕ್ಷಸಸಂಬಂಧಿಗಳೆಲ್ಲಾ ರಾಮನ ಮೇಲೆ ದ್ವೇಷ ಸಾಧಿಸುತ್ತಿದ್ದರು. ರಾಮಲಕ್ಷ್ಮಣರನ್ನು ನೇರವಾಗಿ ಎದುರಿಸಿ ಈ ರಾಕ್ಷಸರಿಗೆ ಗೆಲ್ಲಲಾಗುತ್ತಿರಲಿಲ್ಲ. ಆದರೆ ಸುಲಭವಾಗಿ ಸೀತೆಗೆ ತೊಂದರೆ ಕೊಟ್ಟು ತಮ್ಮ ಸೇಡನ್ನು ತೀರಿಸಿಕೊಳ್ಳಬಹುದಾಗಿತ್ತು. ಆದ್ದರಿಂದ ಸೀತೆ ಭಯಭೀತಳಾಗಿದ್ದಳು. ಒಂದು ಬಾರಿ ಸೀತೆ ರಾಮನಿಗೆ ಬುದ್ಧಿ ಹೇಳಿದಳು. "ನೀವು, ಅನೇಕ ರಾಕ್ಷಸರನ್ನು ಕೊಲ್ಲುತ್ತೀದ್ದೀರಿ; ಅವರೆಲ್ಲರ ಮೇಲೆ ದ್ವೇಷ ಕಟ್ಟಿಕೊಳ್ಳುವುದು ಒಳ್ಳೆಯದಲ್ಲ. ಶಸ್ತ್ರಾಸ್ತ್ರಗಳು ಹಿಂಸೆಯನ್ನು ಪ್ರಚೋದಿಸುತ್ತವೆ. ಶಸ್ತ್ರಾಸ್ತ್ರಗಳ ಸಹವಾಸದಲ್ಲೇ ಬದುಕಬೇಕಾದ ಕ್ಷತ್ರಿಯರಿಗೆ ಶಸ್ತ್ರಗಳಿಂದ ಕೇಡು ತಪ್ಪಿದ್ದಲ್ಲ. ಶಸ್ತ್ರಾಸ್ತ್ರಗಳ ಗೊಡವೆ ಇಲ್ಲದ ಬ್ರಾಹ್ಮಣರು ಎಷ್ಟೋ ಪಾಲಿಗೆ ಸುಖಿಗಳು".

ಆಗ ರಾಮ ಹೇಳಿದ: "ಸೀತೆ, ನೀನು ಉತ್ತಮ ಕುಲದ ರಾಜಕುಮಾರಿ, ಆದ್ದರಿಂದ ನಿನ್ನ ಬಾಯಿಯಲ್ಲಿ ಇಂತಹ ಒಳ್ಳೆಯ ಮಾತುಗಳು ಬರುತ್ತಿವೆ, ಆದರೆ ನಾನೇನು ಮಾಡಲಿ? ಕೆಟ್ಟವರನ್ನು ಶಿಕ್ಷಿಸುವುದು, ಒಳ್ಳೆಯವರನ್ನು ರಕ್ಷಿಸುವುದು ಕ್ಷತ್ರಿಯಧರ್ಮ. ಈ ರಾಕ್ಷಸರು ಋಷಿಗಳಿಗೆ ತೊಂದರೆ ಕೊಡುತ್ತಾರೆ. ಆದ್ದರಿಂದ ನಾನು ರಾಕ್ಷಸರನ್ನು ಕೊಲ್ಲುತ್ತೇನೆ".

ಆಗ ಸೀತೆ, "ನೀವು ಏನೇ ಹೇಳಿ, ಈ ಶಸ್ತ್ರಾಸ್ತ್ರಗಳು ನನಗೆ ಸ್ವಲ್ಪವೂ ರುಚಿಸುತ್ತಿಲ್ಲ, ಈ ಸಂಬಂಧವಾಗಿ ಒಂದು ಕತೆಯನ್ನು ಕೇಳಿ" ಎಂದು ಒಂದು ಕಥೆಯನ್ನು ಹೇಳಿದಳು:

ಬಹಳ ಹಿಂದೆ ಒಬ್ಬ ಋಷಿ ಕಾಡಿನಲ್ಲಿ ತಪಸ್ಸು ಮಾಡಿಕೊಂಡಿದ್ದ. ಹಾಗಾಗಿ ಇಂದ್ರನಿಗೆ ತನ್ನ ಸಿಂಹಾಸನ ಹೋದೀತು ಎಂದು ಹೆದರಿಕೆಯಾಯಿತು. ಋಷಿಯ ತಪಸ್ಸನ್ನು ಕೆಡಿಸಲು ಒಂದು ಉಪಾಯ ಮಾಡಿದ. ಅವನು ಋಷಿಯ ಬಳಿ ಬಂದು, 'ಸ್ವಾಮಿ, ನನ್ನ ಬಳಿ ಒಂದು ಅಮೂಲ್ಯವಾದ ಕತ್ತಿ ಇದೆ. ಇದನ್ನು ತಮ್ಮ ಆಶ್ರಮದಲ್ಲಿ ಇಟ್ಟು ಹೋಗಿರುತ್ತೇನೆ. ನಾನು ಪುನಃ ಬಂದು ಇದನ್ನು ಕೊಂಡೊಯ್ಯುತ್ತೇನೆ, ಅಲ್ಲಿಯವರೆಗೆ ಈ ಕತ್ತಿ ಸುರಕ್ಷಿತವಾಗಿ ನಿಮ್ಮಲ್ಲಿಯೇ ಇರಲಿ' ಎಂದು ಕೇಳಿಕೊಂಡ.

ಆಗ ಋಷಿ 'ಅದಕ್ಕೇನಂತೆ? ಅದನ್ನು ನನ್ನ ಆಶ್ರಮದ ಒಂದು ಮೂಲೆಯಲ್ಲಿ ಇಟ್ಟುಹೋಗು' ಎಂದು ಹೇಳಿದ. ಹೀಗೆ ಸ್ವಲ್ಪ ಕಾಲವಾದ ನಂತರ ಋಷಿಗೆ ಆ ಕತ್ತಿಯ

ಮೇಲೆ ವಿಶೇಷ ಕುತೂಹಲ ಮೂಡಿತು. ಅದರಿಂದ ಅವನು ಚಿಕ್ಕಮಟ್ಟ ಎಲೆ ಬಳ್ಳಿಗಳನ್ನು ಕತ್ತರಿಸಲು ಆರಂಭಿಸಿದ. ಕ್ರಮೇಣ ಅದೇ ಅಭ್ಯಾಸವಾಗಿ ಕೈಗೆ ಸಿಕ್ಕ ಪ್ರಾಣಿ–ಪಕ್ಷಿಗಳನ್ನೆಲ್ಲಾ ಕತ್ತರಿಸಿ ಹಾಕಲಾರಂಭಿಸಿದ, ಹೀಗೆ ಅವನು ಹಿಂಸಾಕಾರ್ಯಗಳಲ್ಲಿ ತೊಡಗಿ ತನ್ನ ತಪಸ್ಸನ್ನು ಕಳೆದುಕೊಂಡ. ಆದ್ದರಿಂದ ಶಸ್ತ್ರಾಸ್ತ್ರಗಳು ಎಲ್ಲಿರುತ್ತವೆಯೋ ಅಲ್ಲಿ ಹಿಂಸೆ ತಾನಾಗಿಯೇ ಉತ್ಪತ್ತಿಯಾಗುತ್ತದೆ. ಹಾಗಾಗಿ ನಾವು ಶಸ್ತ್ರಗಳಿಂದ ದೂರ ಇರುವುದೇ ಒಳ್ಳೆಯದು.

ಶಸ್ತ್ರ ಮತ್ತು ಹಿಂಸೆಗಳಿಗೆ ಇರುವ ಸಂಬಂಧವನ್ನು ಕೇವಲ ಬೌದ್ಧಿಕವಾಗಿ ಅರಿತರೆ ಈ ಬಗೆಯ ವಿವೇಕ ಹುಟ್ಟುತ್ತದೆಯೆ? ಔಪಚಾರಿಕ ಶಿಕ್ಷಣ ಈ ವಿವೇಕವನ್ನು ಕೊಟ್ಟಿದ್ದರೆ ನಾವು ಅಣುಬಾಂಬುಗಳ ತಂಟೆಗೇ ಹೋಗುತ್ತಿರಲಿಲ್ಲ. ಮನುಷ್ಯನ ಅಳಿವು–ಉಳಿವಿನ ಪ್ರಶ್ನೆ ಬಂದಾಗ ಔಪಚಾರಿಕ ಶಿಕ್ಷಣ ನಮಗೆ ಉಪಯೋಗಕ್ಕೆ ಬರುತ್ತಿಲ್ಲ ಎಂಬುದು ತಿಳಿದುಬರುತ್ತಿದೆ.

ಹಿಟ್ಲರ್ ಹಾಗೂ ಗಾಂಧಿ

ಈ ಸಂದರ್ಭದಲ್ಲಿ ನಮ್ಮ ಆಶ್ರಮದಲ್ಲಿ ನಡೆದ ಘಟನೆಯೊಂದು ನೆನಪಾಗುತ್ತಿದೆ. ಜರ್ಮನಿಯ ಇಬ್ಬರು ಯುವತಿಯರು ಆಗಾಗ ನಮ್ಮಲ್ಲಿಗೆ ಬಂದು ತಮ್ಮನ್ನು ಸೇವಾಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ. ಹೀಗೆ ಬಂದವರಲ್ಲಿ ಇಬ್ಬರು ಯುವತಿಯರು ನಮ್ಮೂರಿನ ಅಂಗಡಿಯೊಂದರಲ್ಲಿ ತಮಗಾದ ಅನುಭವವನ್ನು ಹೇಳಿಕೊಂಡು ಅತ್ತೇ ಬಿಟ್ಟರು. ಅಂಗಡಿಯಾತ ಇವರನ್ನು ನೀವು ಯಾವ ದೇಶದಿಂದ ಬಂದಿದ್ದೀರಿ ಎಂದು ಕೇಳಿದನಂತೆ. ಅದಕ್ಕೆ ಅವರು ಜರ್ಮನಿಯಿಂದ ಎಂದು ಹೇಳಿದರಂತೆ. ಆತ ತಕ್ಷಣ 'ಓ, ಹಿಟ್ಲರ್‌ನ ದೇಶದಿಂದ ಬಂದಿದ್ದೀರಾ?' ಎಂದನಂತೆ. ಇಂತಹ ಪ್ರತಿಕ್ರಿಯೆಯನ್ನು ಈ ಯುವತಿಯರು ನಿರೀಕ್ಷಿಸಿರಲಿಲ್ಲ. ಅವರಿಗೆ ಎಷ್ಟು ಆಘಾತವಾಯಿತೆಂದರೆ ಅಂಗಡಿಯಲ್ಲಿ ಏನೂ ಕೊಳ್ಳದೆ ಮನೆಗೆ ಹಿಂತಿರುಗಿ ಬಂದು ಮಂಕಾಗಿ ಕುಳಿತಿದ್ದರು. 'ಏನು ಸಮಾಚಾರ' ಎಂದು ವಿಚಾರಿಸಿದಾಗ ಆದ ಘಟನೆಯನ್ನು ವಿವರಿಸಿ 'ಅಂಗಡಿಯಾತ ಎಂತಹ ನಿರ್ದಯಿ! ಜರ್ಮನಿಯನ್ನು ಲ್ಯಾಂಡ್ ಆಫ್ ಹಿಟ್ಲರ್ ಎಂದನಲ್ಲ!' ಎಂದು ದುಃಖಪಟ್ಟರು. ಆಗ ನಾನು ಭಾವಿಸಿದೆ – ಒಂದು ವೇಳೆ ನಾವು ಹೊರದೇಶಕ್ಕೆ ಹೋದಾಗ ಅಲ್ಲಿಯ ಜನ ಎಲ್ಲಿಂದ ಬಂದಿದ್ದೀರಿ ಎಂದು ಕೇಳಿದರೆ, ನಾವು – ಇಂಡಿಯಾ ಎಂದಾಗ ಅಲ್ಲಿಯವರು 'ಲ್ಯಾಂಡ್ ಆಫ್ ಗಾಂಧಿ' ಎಂದು ಹೇಳಬೇಕಷ್ಟೆ. ಆಗ ನಮಗೆ ದುಃಖವಾಗುವುದಿಲ್ಲ, ಸಂತೋಷವಾಗುತ್ತದೆ. ಯಾವ ಆಯ್ಕೆಯನ್ನೂ ಮಾಡದೆ ನಾವು ಒಂದು ದೇಶಕ್ಕೆ ಸೇರಿದ್ದೇವೆ. ಆದರೂ ನಮ್ಮ ನಂಬಿಕೆ ಆಚಾರ ವಿಚಾರಗಳಿಗನುಗುಣವಾಗಿ ನಮ್ಮ ಸಂಸ್ಕೃತಿ ರೂಪುಗೊಳ್ಳುತ್ತದೆ. ಅದಕ್ಕನುಗುಣವಾಗಿ ನಮ್ಮ ನಾಯಕರು ರೂಪುಗೊಳ್ಳುತ್ತಾರೆ. ಅದರ ಪರಿಣಾಮವನ್ನು ಇಡೀ ದೇಶದ ಜನ ಅನುಭವಿಸುತ್ತಾರೆ. ನಮ್ಮ ದೇಶದ ಅಹಿಂಸಾ ಸಿದ್ಧಾಂತಕ್ಕೆ ಗಾಂಧೀಜಿಯವರೊಬ್ಬರೇ ಕಾರಣರಲ್ಲ. ಮಹಾವೀರ,

ಬುದ್ಧರಿಂದ ಇಲ್ಲಿಯವರೆಗೆ ಶತಶತಮಾನಗಳ ಪರ್ಯಂತ 'ಅಹಿಂಸೆಯೇ ಪರಮಧರ್ಮ' ಎಂಬ ನಂಬಿಕೆಯನ್ನಿಟ್ಟುಕೊಂಡು ಜನ ಬದುಕಿಬಂದಿದ್ದಾರೆ. ಚಾರಿತ್ರಿಕವಾಗಿ ಒಂದು ಜನಸಮುದಾಯ ಪೋಷಿಸಿಕೊಂಡು ಬರುವ ಪ್ರಧಾನ ವಿಚಾರಧಾರೆ ಆಯಾ ಪ್ರದೇಶದ ಒಬ್ಬ ಪ್ರಭಾವಶಾಲಿ ವ್ಯಕ್ತಿ ನಂಬಿದ, ಬದುಕಿದ ಚಿಂತನೆಯಾಗಿರುತ್ತದೆ. ಮೊದಲನೆಯದಾಗಿ ಎಂತಹ ವ್ಯಕ್ತಿ ನಮ್ಮ ಸಮುದಾಯದ ಮೇಲೆ ಪ್ರಭಾವ ಬೀರಬಲ್ಲ ಎಂಬುದು ಸಮೂಹ ಮನಸ್ಸನ್ನು ಕೊಂಚ ಮಟ್ಟಿಗೆ ಅವಲಂಬಿಸಿದೆಯಾದರೂ ಈ ಪ್ರಭಾವಿ ವ್ಯಕ್ತಿ ತಳೆಯುವ ನಿಲುವು ನಿರ್ಣಾಯಕವಾಗಬಲ್ಲುದು. ಅದೃಷ್ಟವಶಾತ್ ನಾವು ಗಾಂಧಿಯಿಂದ ಪ್ರಭಾವಿತರಾಗಿದ್ದೇವೆ. ದುರದೃಷ್ಟದಿಂದಾಗಿ ಜರ್ಮನರು ಹಿಟ್ಲರ್‌ನ ಹಿಡಿತಕ್ಕೆ ಸಿಕ್ಕಿಕೊಂಡಿದ್ದರು. ಆದರೆ ಈಗಿನ ಪೀಳಿಗೆಯ ಜರ್ಮನ್ ಯುವಕರು ಹಿಟ್ಲರನನ್ನು ನೆನೆದರೆ ಸಾಕು ನಾಚಿಕೆಯಿಂದ ತಲೆ ತಗ್ಗಿಸುತ್ತಾರೆ. ಹಿಟ್ಲರನ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವಂತಹದು. ಇಂದು ಏನೂ ಇಲ್ಲ. ಅಹಿಂಸೆಯಂತಹ ಒಂದು ಮೌಲ್ಯವನ್ನು ಎತ್ತಿಹಿಡಿದ ನಮ್ಮ ಚಿಂತನೆಯನ್ನು ಯಾವುದೋ ಒಂದು ಆಧುನಿಕ ಅಲೆ ಹೊಡೆದುಕೊಂಡು ಹೋಗದಂತೆ ನಮ್ಮ ಶಿಕ್ಷಣ ಕಾಯಬೇಕು. ಇಲ್ಲದೆ ಹೋದರೆ ಕ್ರಮೇಣ ಇಡೀ ಭೂಮಿಯೇ ಹಿಟ್ಲರ್‌ನ ಭೂಮಿಯಾಗಿ ಪರಿಣಮಿಸುತ್ತದೆ.

ವಿಧ್ವಂಸಕಕಾರಿ ಮನಸ್ಸು ಹುಟ್ಟುವುದು ಹೇಗೆ?

ನಮ್ಮ ಇತ್ಯಾತ್ಮಕ-ನೇತ್ಯಾತ್ಮಕ ಚಿಂತನೆಗಳು ಹುಟ್ಟುವ ಬಗೆಯನ್ನು ವಿಶ್ಲೇಷಿಸಿದರೆ ನಮಗೆ ತಿಳಿಯುತ್ತದೆ – ನಾವು ಯಾವ ಪ್ರಯತ್ನವೂ ಇಲ್ಲದೆ ನೇತ್ಯಾತ್ಮಕ ಚಿಂತನೆಯನ್ನು ಮಾಡಬಲ್ಲೆವು ಎಂದು. ಇವುಗಳನ್ನು Automatic Negetive Thoughts ಅಥವಾ 'ANT' ಎನ್ನುತ್ತಾರೆ. ಇತ್ಯಾತ್ಮಕ ಚಿಂತನೆಗಳು ಮನಸ್ಸಿನಲ್ಲಿ ಮೂಡಬೇಕಾದರೆ ನಾವು ಸಾಕಷ್ಟು ಪ್ರಯತ್ನಪಡಬೇಕಾಗುತ್ತದೆ. ಅಧ್ಯಾತ್ಮಸಾಧನೆ ಮಾಡುವವರಿಗೆ ಮಂಗಳದೃಷ್ಟಿ ಇರಬೇಕು ಎಂದು ಗುರುಗಳು ಹೇಳುತ್ತಾರೆ. ಪ್ರಯತ್ನಪೂರ್ವಕವಾಗಿ ಸಾಧಿಸಬೇಕಾದ ಕೆಲಸವಿದು. ವ್ಯಕ್ತಿವಿಕಾಸದ ದೃಷ್ಟಿಯಿಂದ ಇತ್ಯಾತ್ಮಕ ಮನೋಧರ್ಮ ಬಹಳ ಮುಖ್ಯ. ಪರಿಪೂರ್ಣ ವ್ಯಕ್ತಿತ್ವ ಅಧ್ಯಾತ್ಮಸಾಧನೆಯ ಶಿಖರ ಎಂದು ಭಾವಿಸುವುದಾದರೆ ಇದಕ್ಕೆ ಇತ್ಯಾತ್ಮಕ ದೃಷ್ಟಿ ಅಗತ್ಯ. ನೇತ್ಯಾತ್ಮಕ ಮನೋಧರ್ಮ ನಮ್ಮನ್ನು ಸಣ್ಣಸಣ್ಣ ವಲಯಗಳಲ್ಲಿ ಬಂಧಿಯಾಗಿಡುತ್ತದೆ. ವಿಶ್ವಮಾನವತೆಯ ಮನೋಧರ್ಮವನ್ನು ಸಾಧಿಸಬೇಕಾದರೆ ಇತ್ಯಾತ್ಮಕ ಮನೋಧರ್ಮ ಅನಿವಾರ್ಯ. ನೇತ್ಯಾತ್ಮಕ ವ್ಯಕ್ತಿಗಳು ಮೂಲತಃ ಅಸಂತೋಷಿಗಳು. ಮುಂದುವರಿದು ಹೇಳಬೇಕೆಂದರೆ ಇವರು ವಿಘ್ನಸಂತೋಷಿಗಳಾಗಿ ಪರಿಣಮಿಸುತ್ತಾರೆ. ಹಾಗಾಗಿ ಇವರು ಬೇಸಿಗೆಯ ಬಿಸಿಲಿನಲ್ಲಿ ಒಣಗುತ್ತಿರುವ ಯಾವುದೋ ಒಂದು ಸಣ್ಣ ಕೊಳದಲ್ಲಿ ವಾಸಿಸುತ್ತಿರುವ ಮೀನಿನಂತೆ ಕಂಡುಬರುತ್ತಾರೆ. ಇವರಿಗೆ ಯಾವ ಭವಿಷ್ಯವೂ ಇಲ್ಲ. ಆದರೆ ಇತ್ಯಾತ್ಮಕ ಮನೋಧರ್ಮದ ವ್ಯಕ್ತಿಗಳು ವಿಶಾಲವಾದ

ಸಮುದ್ರದಲ್ಲಿ ಈಜುತ್ತಿರುವ ಮೀನಿನಂತೆ. ಇವರು ನಿರ್ಭಯವಾದ ಸ್ವತಂತ್ರ ವ್ಯಕ್ತಿತ್ವವನ್ನು ಪಡೆದುಕೊಳ್ಳುತ್ತಾರೆ. ಆದ್ದರಿಂದ ಇತ್ಯಾತ್ಮಕ ಮನೋಧರ್ಮದ ವ್ಯಕ್ತಿಯೊಬ್ಬ ಆರೋಗ್ಯಕರ ಬೆಳವಣಿಗೆಯ ಎಲ್ಲಾ ಮುಖಗಳಿಗೂ ತನ್ನನ್ನು ತಾನು ತೆರೆದುಕೊಳ್ಳುತ್ತಾನೆ. ಈ ಸಂದರ್ಭದಲ್ಲಿ ಮಹಾಭಾರತದ ಕಥೆಯೊಂದು ನೆನಪಿಗೆ ಬರುತ್ತದೆ. ಧರ್ಮರಾಜನನ್ನು ಈ ಪ್ರಪಂಚದಲ್ಲಿ ಕೆಟ್ಟವರನ್ನು ಹುಡುಕಿಕೊಂಡು ಬಾ ಎಂದು ಹೇಳಿ ಕಳುಹಿಸಿದರಂತೆ. ಅವನು ಪ್ರಪಂಚವನ್ನೆಲ್ಲ ಸುತ್ತಿ ಕಡೆಗೆ ಕೆಟ್ಟವರಾರೂ ಸಿಗಲಿಲ್ಲ ಎಂದು ಹಿಂದಿರುಗಿದನಂತೆ. ಹಾಗೆಯೇ ದುರ್ಯೋಧನನನ್ನು ಪ್ರಪಂಚದಲ್ಲಿರಬಹುದಾದ ಒಳ್ಳೆಯವರನ್ನು ಹುಡುಕಿಕೊಂಡು ಬಾ ಎಂದರಂತೆ. ಅವನು ಹಿಂತಿರುಗಿ ಬಂದು ಈ ಪ್ರಪಂಚದಲ್ಲಿ ಒಳ್ಳೆಯವರು ಇಲ್ಲವೇ ಇಲ್ಲ ಎಂದನಂತೆ. ಧನಾತ್ಮಕ ಚಿಂತನೆಯಿಂದ ಮಂಗಳದೃಷ್ಟಿ ಹುಟ್ಟುತ್ತದೆ.

ಆಲೋಚನೆಯ ಧಾಟಿಯನ್ನು ಪ್ರಯತ್ನಪೂರ್ವಕವಾಗಿ ಬದಲಿಸಿಕೊಳ್ಳುವ ಇರಾದೆ ನಮಗೆ ಇದ್ದರೆ ಬಹಳ ಕಾಲದ ಅಭ್ಯಾಸದಿಂದ ನಾವು ಇತ್ಯಾತ್ಮಕ ಅಥವಾ ಧನಾತ್ಮಕ ಚಿಂತನೆಯನ್ನು ರೂಢಿಸಿಕೊಳ್ಳಲು ಸಾಧ್ಯ. ಈ ಧನಾತ್ಮಕ ಚಿಂತನೆಯ ಪ್ರಾಮುಖ್ಯವನ್ನು ಇತ್ತೀಚೆಗಷ್ಟೇ ನಮ್ಮ ಶಿಕ್ಷಣ ಇಲಾಖೆಗಳು ಗುರುತಿಸುತ್ತಿವೆ. ಹಾಗಾಗಿ ಅಧ್ಯಾಪಕರಿಗೆ ಧನಾತ್ಮಕ ಚಿಂತನೆಯ ಶಿಬಿರಗಳನ್ನು ಏರ್ಪಡಿಸುತ್ತಿವೆ.

ನೇತ್ಯಾತ್ಮಕ ಚಿಂತನೆ ಎಲ್ಲಿಂದ ಹುಟ್ಟುತ್ತದೆ? ಅದು ಏಕೆ ನಮ್ಮ ಪ್ರಧಾನ ಆಲೋಚನೆಯ ಧಾಟಿಯಾಗಿದೆ ಎಂಬುದನ್ನು ಕುರಿತು ನಾವು ಚಿಂತಿಸಬೇಕಾಗಿದೆ. ಮಗುವಿನ ಪ್ರತಿಯೊಂದು ನಡವಳಿಕೆಯ ಹಿಂದೆಯೂ ಒಂದು ಕಾರಣವಿರುತ್ತದೆ. ಹುಟ್ಟಿನಿಂದಲೇ ಜೊತೆಗೆ ಬರುವ ಭಯ, ಸಂಶಯ, ಆಕ್ರಮಣಕಾರಿ ಸ್ವಭಾವಗಳು ಜೀವಿಯೊಂದು ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕುಳಿಯಲು ಅಗತ್ಯವಾಗಿರುವ ಹುಟ್ಟರಿವುಗಳು. ಇದರೊಡನೆ ದುಃಖ-ಖಿನ್ನತೆಗಳು ಹುಟ್ಟುತ್ತವೆ. ಶೈಶವದಲ್ಲಿ ಎಳೆಯ ಮಕ್ಕಳಿಗೆ ದುಃಖವಾದಾಗ, ಅಭದ್ರತೆಯ ಭಯ ಉಂಟಾದಾಗ ತನ್ನ ಪರಿಸರ ಮತ್ತು ಜನಗಳ ಬಗ್ಗೆ ಸಂಶಯ ತಾಳುತ್ತವೆ. ಒಂದು ವೇಳೆ ಯಾರೂ ಮಗುವಿನ ಸಹಾಯಕ್ಕೆ ಬರದಿದ್ದರೆ ಈ ಭಾವನೆಗಳು ನೇತ್ಯಾತ್ಮಕ ಮನೋಧರ್ಮವಾಗಿ ಮಗುವಿನ ಮನಸ್ಸಿನಲ್ಲಿ ಬೇರೂರಬಹುದು. ಮುಂದೆ ನೇತ್ಯಾತ್ಮಕ ಚಿಂತನೆಯ ಧಾಟಿ ಮಗುವಿನ ವ್ಯಕ್ತಿತ್ವದ ಭಾಗವಾಗಬಹುದು. ಆದರೆ ತಾಯಿ ಅಥವಾ ಪೋಷಕರು ಮಗುವಿಗೆ ದುಃಖವಾದಾಗ, ಭಯವಾದಾಗ, ಅದರ ಅಳುವನ್ನು ಗುರುತಿಸಿ ಆರೈಕೆ ಮಾಡಿದರೆ, ಮಗುವಿಗೆ ಮುದನೀಡುವ ಇತ್ಯಾತ್ಮಕ ಭಾವನಾಸಂದೇಶವನ್ನು ಕೃತಿಯ ಮೂಲಕ ತೋರಿದರೆ ಮಗು ಈ ಭಯ, ದುಃಖಗಳು ಉಂಟುಮಾಡಬಹುದಾದ ಶಾಶ್ವತ ನೇತ್ಯಾತ್ಮಕ ಪರಿಣಾಮದಿಂದ ಪಾರಾಗುತ್ತದೆ. ಇಂದಿನ ಮೆದುಳಿಗೆ ಸಂಬಂಧಪಟ್ಟ ಸಂಶೋಧನೆಗಳು ಈ ಅಂಶವನ್ನು ನಿರ್ವಿವಾದವಾಗಿ ತೋರಿಸಿಕೊಟ್ಟಿವೆ. ತಾಯಿಯೊಬ್ಬಳು ಮಗು ಅಳುತ್ತಿರುವಾಗ ಅಥವಾ ರಗಳೆ ಮಾಡುತ್ತಿರುವಾಗ ಅದಕ್ಕೆ ಒಂದು ಕಾರಣವಿದೆ

ಎಂದು ಗುರುತಿಸದೆ ಕೋಪಗೊಂಡು ಮಗುವನ್ನು ಶಿಕ್ಷಿಸಿದರೆ ಇದು ಮಗುವಿನ ಮನಸ್ಸಿನ ಮೇಲೆ ಶಾಶ್ವತವಾದ ನೇತ್ಯಾತ್ಮಕ ಪರಿಣಾಮವನ್ನುಂಟುಮಾಡುತ್ತದೆ. ಒಂದು ವರ್ಷದಷ್ಟು ಎಳೆಯ ಮಕ್ಕಳೂ ತಮ್ಮ ಭಾವನೆಗಳನ್ನು ಹಂಚಿಕೊಳ್ಳುವ ಮೂಲಕ ದುಃಖ ಶಮನಮಾಡಿಕೊಳ್ಳುತ್ತವೆ ಎಂಬ ಸತ್ಯ ಪೋಷಕರಿಗೆ ತಿಳಿದಿರಬೇಕು. ನಿರ್ಲಕ್ಷ್ಯಕ್ಕೆ ಒಳಗಾದ ಎಳೆಯ ಮಕ್ಕಳು ಹಂಚಿಕೊಳ್ಳಲಾರದ ಈ ಭಾವನೆಗಳನ್ನು ತಮ್ಮ ಮನಸ್ಸಿನ ಆಳಕ್ಕೆ ತಳ್ಳಿಬಿಡುತ್ತವೆ. ಹೀಗೆ ಆಳಕ್ಕೆ ತಳ್ಳಲಾದ ಈ ಭಾವನೆಗಳು ಜೀವನಪರ್ಯಂತ ಮನದಾಳದಲ್ಲಿ ಕುಳಿತು ನಿಷ್ಕಾರಣವಾದ ಭಯ–ಸಂಶಯಗಳಿಗೆ ಕಾರಣವಾಗುತ್ತದೆ. ಇದರ ಪರಿಣಾಮವಾಗಿ ಈ ಮಕ್ಕಳ ಮೆದುಳಿನ ರಾಸಾಯನಿಕ ರಚನೆಯೇ ಬದಲಾಗಬಹುದು. ಅಲ್ಲದೆ ನಿಯಂತ್ರಣಕ್ಕೆ ಬಾರದ ಭಾವೋದ್ರೇಕಗಳು ನೇತ್ಯಾತ್ಮಕ ಚಿಂತನೆಗೂ ಕಾರಣವಾಗಬಹುದು. ಶೈಶವದಲ್ಲಿ ಭಾವನಾತ್ಮಕ ನೆರವನ್ನು ಪಡೆದ ಮಕ್ಕಳು ಇತ್ಯಾತ್ಮಕ ಸ್ವಭಾವವನ್ನು ಬೆಳೆಸಿಕೊಳ್ಳುವುದು ಸಂಶೋಧನೆಗಳಿಂದ ದೃಢಪಟ್ಟಿದೆ. ತಮ್ಮ ಭಾವನೆಗಳನ್ನು ಹಂಚಿಕೊಳ್ಳುವ ಮೂಲಕ ದುಗುಡವನ್ನು ಕಡಿಮೆಮಾಡಿಕೊಳ್ಳುವ ಕಲೆಯನ್ನು ಈ ಮಕ್ಕಳು ಕರಗತಮಾಡಿಕೊಳ್ಳುತ್ತವೆ. ಕೆಲವೊಮ್ಮೆ ತಾಯಿಯೊಬ್ಬಳು ಮಾನಸಿಕ ಅಸ್ವಸ್ಥತೆಯಿಂದ ನರಳುತ್ತಿದ್ದರೆ ಅಥವಾ ಖಿನ್ನತೆಯಿಂದ ಬಳಲುತ್ತಿದ್ದರೆ ಅಥವಾ ಸ್ವಭಾವತಃ ಸೋಮಾರಿಯಾಗಿದ್ದರೆ ಇದು ಮಗುವಿನ ಆರೋಗ್ಯದ ಮೇಲೆ ಶಾಶ್ವತ ನೇತ್ಯಾತ್ಮಕ ಪರಿಣಾಮಗಳನ್ನು ಬೀರುತ್ತದೆ. ಒಟ್ಟಿನಲ್ಲಿ ಮಗುವಿಗೆ ಭಾವನಾತ್ಮಕ ನೆರವು ದೊರೆಯದೆ ಇದ್ದರೆ ಅದು ತನ್ನ ಭಾವವೈಪರೀತ್ಯಗಳನ್ನು ಸುಲಭವಾಗಿ ಸಮತೋಲನದಲ್ಲಿ ಹಿಡಿದಿಡುವ ಕಲೆಯನ್ನು ಕಲಿಯುವುದೇ ಇಲ್ಲ. ನಿಯಂತ್ರಣ ತಪ್ಪಿದ ಭಾವನೆಗಳು ನೇತ್ಯಾತ್ಮಕತೆಗೆ ಕೊಂಡೊಯ್ಯುತ್ತವೆ.

ನೇತ್ಯಾತ್ಮಕ ಮನೋಧರ್ಮಕ್ಕೆ ಇಂದಿನ ಜಾಗತೀಕರಣದ ಸಂಸ್ಕೃತಿಯೂ ಕಾರಣ ಎಂಬುದನ್ನು ನಾವು ಗುರುತಿಸಬೇಕು. ವಸ್ತುಪ್ರಧಾನವಾದ ಸಂಸ್ಕೃತಿಯಲ್ಲಿ ಪ್ರತಿಯೊಂದು ಸಹ 'ಪ್ಲಾನ್' ಪ್ರಕಾರ, ಎಂದರೆ ಪೂರ್ವಯೋಜಿತ ಕಾರ್ಯಕ್ರಮದಂತೆ ನಡೆಯಬೇಕು. ಗೆಳೆಯರನ್ನು ನೋಡಬೇಕಾದರೆ, ಅತಿಥಿಗಳು ಬರುವುದಾದರೆ ಎಲ್ಲವೂ ಪೂರ್ವನಿಯೋಜಿತವಾಗಿರಬೇಕು. ಪಾಶ್ಚಾತ್ಯ ಸಂಸ್ಕೃತಿಯ ದುರದೃಷ್ಟಕರ ಅಂಶ ಎಂದರೆ ಅರ್ಥವಿಲ್ಲದ ಪ್ರಮಾಣದಲ್ಲಿ ಅವರು ಅನುಸರಿಸುವ 'ಪ್ರೈವೆಸಿ–ಫಾರ್ಮಾಲಿಟಿ'. ಇದು ಮತ್ತೊಬ್ಬರು ತನಗೆ ತೊಂದರೆ ಕೊಡದಂತೆ ನಿಗ್ರಹಿಸಲು, ಸಾಧ್ಯವಾದರೆ ಇತರರನ್ನು ಸದಾ ಕಾಲವೂ ಅಂಕೆ–ಆಜ್ಞೆಯಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗಿಸುವ ಒಂದು ತಂತ್ರ. ವಸಾಹತುಶಾಹಿ ಮನಸ್ಸಿನ ಮೂಲಮಂತ್ರ ಇದೇ. ಇದರ ನೆರವಿನಿಂದಲೇ ಬ್ರಿಟಿಷರು ಇಡೀ ಪ್ರಪಂಚವನ್ನು ಆಳಲು ಸಾಧ್ಯವಾಯಿತು. ಭಾವನಾತ್ಮಕ ಸಂಬಂಧಗಳನ್ನು ಲೆಕ್ಕಿಸದಂತಹ ನೇತ್ಯಾತ್ಮಕ ಸ್ವಭಾವವನ್ನು ಬೆಳೆಸಿಕೊಂಡರೆ ಮಾತ್ರ ವಸಾಹತುಶಾಹಿ ಸಾಧ್ಯವಾಗುತ್ತದೆ. ಆಳುವ ನೀತಿಯ ಮತ್ತೊಂದು ಮುಖವನ್ನು ನಾವು 'ಜಾಗತೀಕರಣ'

ಎಂದು ಗುರುತಿಸಬಹುದು. ಇದು ಮನುಷ್ಯನ ವಸ್ತು ಅವಲಂಬನೆಯನ್ನು ಹೆಚ್ಚು ಮಾಡಿ ಭಾವನಾತ್ಮಕ ಬಡತನಕ್ಕೆ ಕಾರಣವಾಗಿದೆ. ಒಟ್ಟಿನಲ್ಲಿ ಅಸ್ಪಷ್ಟವಾದ ಭಾವನಾತ್ಮಕ ವಲಯದಿಂದ ನಿಯಂತ್ರಣಕ್ಕೆ ನೆರವಾಗುವ ವಿಚಾರಪ್ರಧಾನ ಮನೋಧರ್ಮಕ್ಕೆ ನಾವು ದಾಪುಗಾಲು ಇಡುತ್ತಿದ್ದೇವೆ. ಇದರ ಹಿಂದೆ ಇರುವ ಮುಖ್ಯ ಉದ್ದೇಶ ಮಾತ್ರ ವಸ್ತುಲಾಭವೇ ಹೊರತು ಸತ್ಯಶೋಧನೆಯಲ್ಲ. ವೈಚಾರಿಕತೆಯಿಂದ ಸರಕು ಪಡೆಯುವುದೇನೋ ನಿಜ. ಆದರೆ ಜೀವನದ ಅರ್ಥವನ್ನು ಎತ್ತಿ ಹಿಡಿಯುವ, ಜೀವನಸಂತೋಷವನ್ನುಂಟುಮಾಡುವ ನಮ್ಮದೇ ಆದ ಭಾವನಾತ್ಮಕ ವಲಯದಿಂದ ನಾವು ದೂರ ಸರಿಯುತ್ತಿದ್ದೇವೆ. ಇದು ಕೂಡ ನಮ್ಮ ನೇತ್ಯಾತ್ಮಕ ಚಿಂತನೆಗಳಿಗೆ ಕಾರಣ ಎಂಬುದನ್ನು ನಾವು ಗುರುತಿಸಲೇಬೇಕು. ಸರಕು ಸಂಸ್ಕೃತಿ ಮತ್ತು ಸರಕು ಸಮೃದ್ಧಿಯ ನಡುವೆ ಜೀವನಪ್ರೀತಿಯನ್ನು, ಜೀವನದ ಸಂತೋಷವನ್ನು ಕಳೆದುಕೊಂಡಿರುವುದನ್ನು ವಾಸ್ತವವಾಗಿ ಅನುಭವಿಸಿದರೂ ಮನುಷ್ಯ ತಾನು ಕಳೆದುಕೊಂಡಿರುವುದನ್ನು ಒಪ್ಪಲು ತಯಾರಿಲ್ಲ. ಇಂತಹ ಒಂದು ಮಿಥ್ಯಾ ಮನೋಧರ್ಮವನ್ನು ಸೃಷ್ಟಿಸುವಲ್ಲಿ ಜಾಗತೀಕರಣ ಬಹಳ ಯಶಸ್ವಿಯಾಗಿದೆ.

ಸರಕುಸಂಸ್ಕೃತಿಯ ಪರಿಣಾಮ

ದುಃಖ, ಖಿನ್ನತೆ, ಅಭದ್ರತೆಯ ಅನುಭವಗಳು ಹುಟ್ಟರಿವುಗಳಾಗಿ ಬರುವುದರ ಜೊತೆ ಜೊತೆಗೆ ಜಾಗತೀಕರಣ ರೂಪಿಸುವ ಮಿಥ್ಯಾ ಮನೋಧರ್ಮವು ನೇತ್ಯಾತ್ಮಕತೆಯ ಹೆಚ್ಚಳಕ್ಕೆ ಕಾರಣವಾಗಿದೆ. ಮೊದಲನೆಯದಾಗಿ ಸರಕುಸಂಸ್ಕೃತಿಯಿಂದಾಗಿ ಮನುಷ್ಯಸಂಬಂಧಗಳಲ್ಲಿ ಭಾವನಾತ್ಮಕ ಬೆಸುಗೆ ಕಡಿಮೆಯಾಗುತ್ತಿದೆ. ಇದು ಎಲ್ಲ ಬಗೆಯ ಮನುಷ್ಯಸಂಬಂಧಗಳ ಮೇಲೂ ಪ್ರಭಾವ ಬೀರುತ್ತಿದೆ. ಈ ಪ್ರಭಾವಕ್ಕೆ ನಮ್ಮ ತಾಯಂದಿರೂ ಹೊರತಲ್ಲ. ತಾಯಿ ತನ್ನ ಮಗುವಿಗೆ ನೀಡುವ ಭಾವನಾತ್ಮಕ ನೆರವಿನಲ್ಲೂ ಜಾಗತೀಕರಣದ ಕಪ್ಪುನೆರಳು ಕಾಣುತ್ತಿದೆ. ಒಮ್ಮೆ ನಾನು ಸೂಪರ್ ಮಾರ್ಕೆಟ್ ಒಂದರಲ್ಲಿ ತಾಯಿ ತನ್ನ ಮೂರು ವರ್ಷದ ಮಗುವಿನೊಡನೆ ನಡೆಯುತ್ತಿದ್ದುದನ್ನು ಗಮನಿಸಿದೆ. ಆ ಯುವ ತಾಯಿಗೆ ತನ್ನ ಗಮನವೆಲ್ಲ ತನ್ನ ಸೌಂದರ್ಯದ ಕಡೆಗೆ. ತಾಯಿ ಎತ್ತಿಕೊಳ್ಳಲಿ ಎಂದು ಮಗು ಅಳುತ್ತಿತ್ತು. ಆದರೆ ಈ ತಾಯಿಗೆ ತಾನು ತನ್ನ ಮಗುವನ್ನು 'ಗಾಢವಾಗಿ ಪ್ರೀತಿಸುವ ತಾಯಿ' ಎಂದು ಕಾಣಿಸಿಕೊಳ್ಳಲು ಏನೋ ಹಿಂಜರಿಕೆ. ಬಹುಶಃ ಈ ತಾಯಿಗೆ ತನ್ನ ಸೌಂದರ್ಯಕ್ಕಾಗಿ ಮೀಸಲಾಗಿಟ್ಟ ಮನಸ್ಸಿನ ಬಹುದೊಡ್ಡ ಭಾಗವನ್ನು ತಾಯ್ತನದ ಬದ್ಧತೆಯ ಜೊತೆ ವಿನಿಮಯಮಾಡಿಕೊಳ್ಳಲು ಎಳ್ಳಷ್ಟೂ ಇಷ್ಟವಿರಲಿಲ್ಲ ಎಂದು ಕಾಣುತ್ತದೆ. ಆ ತಾಯಿ ತನ್ನ ಮಗುವಿನ ವೇದನೆಯ ಧ್ವನಿಗೆ ಎಷ್ಟು ಕಿವುಡಾಗಿದ್ದಳು ಎಂದರೆ ತನ್ನ ಪ್ರಸನ್ನಚಿತ್ತವನ್ನು ಸ್ವಲ್ಪವೂ ಕಳೆದುಕೊಳ್ಳದೆ ಮಗುವನ್ನು ನಿರ್ಲಕ್ಷಿಸುತ್ತಿದ್ದಳು. ಸೌಂದರ್ಯಸಂಬಂಧವಾದ ಜಾಹೀರಾತುಗಳು ಈ ತಾಯಿಯ ಮನಸ್ಸನ್ನು ಎಷ್ಟು

ಹೊಕ್ಕಿವೆ ಎಂದರೆ ಅದು ತಾಯ್ತನವನ್ನೂ ಮರೆಸುವಷ್ಟು ಶಕ್ತಿಶಾಲಿಯಾಗಿತ್ತು. ತಾಯಿಯಾಗಿದ್ದರೂ ಸುಂದರಿಯಾಗಿ ಕಾಣುತ್ತ ಅನೇಕಾನೇಕ ಯುವಕರ ಹೃದಯ ಢವಗುಟ್ಟುವಂತೆ ಮಾಡಬಹುದೆಂದು ನಮ್ಮ ಕಂಪನಿಗಳು ವಿಶೇಷ 'ಕಾಸ್ಮೆಟಿಕ್' ಜಾಹೀರಾತುಗಳನ್ನು ಸೃಷ್ಟಿಸಿವೆ. ಇಂತಹ ಒಂದು ಭಾವನೆ ಸರಳವಾದ ಜನಗಳ ಮನಸ್ಸಿನಲ್ಲಿ ಬೇರೂರಲು ಪೂರಕವಾಗಿರುವ ಪರಿಸರವನ್ನು ಜಾಗತೀಕರಣದ ಮಾರುಕಟ್ಟೆ ಸೃಷ್ಟಿಸಿದೆ. ಇದರ ಒಟ್ಟು ಸಂದೇಶ ತಾಯ್ತನವನ್ನೂ ಲೆಕ್ಕಿಸದೆ ಸೌಂದರ್ಯವನ್ನು ಕಾಪಾಡಿಕೊಳ್ಳಲು ಸೌಂದರ್ಯವರ್ಧಕಗಳನ್ನು ಕೊಳ್ಳಬೇಕು. ಇದರ ಪರಿಣಾಮವೆಂದರೆ ಮಗುವಿಗೆ ತಾಯಿಯಾದವಳು ನೀಡಬೇಕಾದ ಭಾವನಾತ್ಮಕ ಸಹಸ್ಪಂದನಗಳ ಅಭಾವ. ಮಗು ಇದರಿಂದಾಗಿ 'Emotional deprivation' ನಿಂದ ಬಳಲುತ್ತದೆ. ಇದು ಮತ್ತೆ ನೇತ್ಯಾತ್ಮಕತೆಗೆ ಕಾರಣವಾಗುತ್ತದೆ. 'Emotional deprivation' ಅಥವಾ ಭಾವನಾತ್ಮಕ ಸಹಸ್ಪಂದನಗಳ ಅಭಾವದಿಂದ ಬಳಲುವ ಮಕ್ಕಳು ಬೆಳೆದಂತೆಲ್ಲ ತಮ್ಮೊಳಗಿನ ಭಾವನಾ ಬುದ್ಬುದಗಳನ್ನು ನಿಯಂತ್ರಿಸಲಾರದೆ ನೇತ್ಯಾತ್ಮಕ ಸೆಳೆತಗಳ ತೂಯ್ದಾಟದಲ್ಲಿ ತೊಳಲುತ್ತಇಡೀ ಜೀವನವನ್ನು ಕಳೆಯುತ್ತಾರೆ.

ಈ ಸಂದರ್ಭದಲ್ಲಿ ಶಿವರಾಮಕಾರಂತರ ಅಣ್ಣ ಕೋ.ಲ.ಕಾರಂತರು ತಮ್ಮ 'ಮುಪ್ಪಿನಂಗಳದಲ್ಲಿ ಮುಸ್ಸಂಜೆಯ ಹೊತ್ತು' ಎಂಬ ಪುಸ್ತಕದಲ್ಲಿ ದಾಖಲಿಸಿರುವ ಘಟನೆ ನೆನಪಿಗೆ ಬರುತ್ತದೆ. ಮಕ್ಕಳಿಲ್ಲದ ಅಜ್ಜಿಗೆ ಚಿಕ್ಕಮಕ್ಕಳನ್ನು ಕಂಡರೆ ಬಹಳ ಪ್ರೀತಿ. ಮಕ್ಕಳು ಅಜ್ಜಿಯ ಮನೆಯ ಅಂಗಳದಲ್ಲಿ ಆಡುತ್ತಾರೆ. ಅದನ್ನು ನೋಡಿ ಅಜ್ಜಿ ಸಂತೋಷಪಡುತ್ತಾಳೆ. ಅಷ್ಟೇ ಅಲ್ಲ; ಮಕ್ಕಳು ಬರುವ ಮೊದಲು ತನ್ನ ಮನೆಯ ಮುಂದಿನ ಮಣ್ಣಿನ ಅಂಗಳಕ್ಕೆ ನೀರು ಸಿಂಪಡಿಸುತ್ತಾಳೆ. ಮಕ್ಕಳು ಅಜ್ಜಿಯ ಅಂಗಳದಲ್ಲಿ ಕುಣಿದು ಕುಪ್ಪಳಿಸಿ ನಿರ್ಗಮಿಸಿದ ನಂತರ ಆ ಅಂಗಳದ ತುಂಬಾ ಪುಟ್ಟ ಪುಟ್ಟ ಹೆಜ್ಜೆ ಗುರುತುಗಳು ಉಳಿದಿರುತ್ತವೆ. ಅಜ್ಜಿ ಆ ಹೆಜ್ಜೆ ಗುರುತುಗಳನ್ನು ಪದೇಪದೇ ನೋಡಿ ಆನಂದಪಡುತ್ತಾಳೆ.

ಇದೊಂದು ಸಾಧಾರಣ ಘಟನೆಯಂತೆ ಕಂಡುಬಂದರೂ ಅಜ್ಜಿಯ ಪ್ರೀತಿ ನಿಸ್ಪೃಹವಾಗಿ, ಸರಳವಾಗಿ, ಅವ್ಯಾಜವಾಗಿ ಮಕ್ಕಳ ಕಡೆ ಹರಿಯುತ್ತದೆ. ನಮ್ಮ ಸೂಪರ್ ಮಾರ್ಕೆಟ್ 'ತಾಯಿ' ಅಥವಾ ಸೂಪರ್ ಮಾರ್ಕೆಟ್ 'ಅಜ್ಜಿ' ಯರಿಗೆ ಇಂತಹ ಸರಳಪ್ರೀತಿ ಸಾಧ್ಯವಾಗುವುದೆ? ಇವರು ಪ್ರೀತಿಯೇ ಇಲ್ಲದೆ ಹುಟ್ಟಿದರು ಎಂದು ಭಾವಿಸಲಾಗದು. ಆದರೆ ಈ ಅಮೂಲ್ಯವಾದ ಬದುಕಿಗೆ ಮುದನೀಡುವ ಪ್ರೀತಿ ನಾವೇ ರಚಿಸಿಕೊಂಡಿರುವ ಅನೇಕ ಶಿಷ್ಟಾಚಾರ ಮತ್ತು ತಾಂತ್ರಿಕತೆಗಳ ಜಾಲರಿಯ ಮೂಲಕ ಹಾಯ್ದು ಬರಬೇಕಾಗಿದೆ. ಈ ಎಲ್ಲವನ್ನೂ ದಾಟಿ ಕೊನೆಗೆ ಹೊರಬಂದ ಪ್ರೀತಿ ತಾಂತ್ರಿಕತೆಯ ಸ್ವರೂಪವನ್ನು ಪಡೆಯುವ ಸಾಧ್ಯತೆಯೇ ಹೆಚ್ಚು. ಅಥವಾ ಅದು ಹೊರಬರಲಾರದೆ ಒಳಗೇ ಮುರುಟಿ ಹೋಗಬಹುದು. ಈ ಕಾರಣದಿಂದ ತಾಂತ್ರಿಕತೆ ನಮ್ಮ ಸಂತೋಷವನ್ನು ಹೆಚ್ಚಿಸುವ

ಬದಲು ಅಳಿದುಳಿದ ಸಂತೋಷವನ್ನೂ ಕಸಿದುಕೊಂಡು ಆ ಸ್ಥಾನವನ್ನು "ತಾಂತ್ರಿಕವಾಗಿ ಇದು ಸರಿ, ಆದ್ದರಿಂದ ಇದೇ ಮನುಷ್ಯ ಜೀವನದಲ್ಲಿ ನಾನು ಪಡೆಯಬೇಕಾದ ಪರಮೋಚ್ಚ ಫಲ" ಎಂಬಂತಹ ಭಾವನೆಯನ್ನು ಕೊಡುತ್ತದೆ. ತಾಂತ್ರಿಕ ನಿಷ್ಠೆ ಮತ್ತು ಪ್ರೀತಿಯ ನಿಷ್ಠೆಗಳ ನಡುವೆ ತಾಂತ್ರಿಕ ನಿಷ್ಠೆಯೇ ಗೆಲ್ಲುತ್ತಿರುವುದು ನಮ್ಮ ಇಂದಿನ ದುರಂತ.

ತಾಂತ್ರಿಕವಾಗಿ ಸಮಂಜಸವಾದದ್ದು ಪರಮೋಚ್ಚ ಸತ್ಯ, ವೈಚಾರಿಕವಾಗಿ ಕಂಡುಕೊಂಡದ್ದೆಲ್ಲವೂ ಕಟ್ಟಕಡೆಯ ಸತ್ಯ ಎಂಬ ನಿಲುವಿಗೆ ನಾವು ಬಂದು ನಿಂತಿದ್ದೇವೆ. ಇದನ್ನು ಗಾಂಧೀಜಿ ಪ್ರಶ್ನಿಸುತ್ತಾರೆ. ತಾಂತ್ರಿಕವಾಗಿ, ವೈಚಾರಿಕವಾಗಿ ಒಂದು ನಿರ್ದಿಷ್ಟ ಸಂದರ್ಭದಲ್ಲಿ ನಾವು ಕಂಡುಕೊಂಡ ಸತ್ಯ ತಾರ್ಕಿಕವಾಗಿ ಸಮಂಜಸವೆನಿಸಬಹುದು. ಆದರೆ ಅದೇ ಅಂತಿಮ ಸತ್ಯವಾಗಿರಬೇಕಾಗಿಲ್ಲ. ಯಾವ ಮನೋಧರ್ಮದ ಆಧಾರದ ಮೇಲೆ ವಿಚಾರ ಪ್ರತಿಪಾದನೆಯಾಗಿದೆ ಎಂಬುದನ್ನು ಆಧರಿಸಿ ವೈಚಾರಿಕತೆಯ ಫಲಶ್ರುತಿ ಪವಿತ್ರವೋ ಅಪವಿತ್ರವೋ ಎಂದು ನಿರ್ಧರಿಸಬೇಕಾಗುತ್ತದೆ. ನಮ್ಮೊಳಗೇ ಈ ವೈಚಾರಿಕತೆಯನ್ನು (Rational Element) ಪವಿತ್ರಗೊಳಿಸಬಲ್ಲ ಒಂದು ಘಟಕ ಇದೆ. ಗಾಂಧೀಜಿ ಹೇಳುತ್ತಾರೆ – 'ದಯವಿಟ್ಟು ಇಂತಹದು ಒಂದು ಇದೆ ಎಂಬುದನ್ನು ಗುರುತಿಸಿ'. ಈ ಸಂದರ್ಭದಲ್ಲಿ ಐನ್‌ಸ್ಟೈನ್ ಅವರ ಮಾತನ್ನು ನೆನಪಿಸಿಕೊಳ್ಳುವುದು ಒಳಿತು. ಅವರು ಹೇಳುತ್ತಾರೆ – ಯಾವುದೇ ವಾದ ಅಥವಾ ಥಿಯರಿಗೆ ಹುಟ್ಟು, ಬೆಳವಣಿಗೆ, ಪರಾಕಾಷ್ಠತೆ (Climax) ಮತ್ತು ಇಳಿಮುಖ (decline) ಎಂಬುದು ಇರುತ್ತದೆ. ಎಂದರೆ ತಾರ್ಕಿಕವಾಗಿ ಪ್ರತಿಪಾದಿಸಿದ ಯಾವುದೇ ವಾದ ಅಚಲವಾದ ಪರಮಸತ್ಯವಲ್ಲ. ಮನುಷ್ಯನ ಗ್ರಹಿಕೆ ವಿಸ್ತಾರಗೊಂಡಂತೆ ಅದೇ ತರ್ಕವನ್ನು ಪುನರ್ವಿಂಗಡಿಸಿ ಸೃಜನಶೀಲ ಆಯಾಮದಲ್ಲಿ ಮತ್ತೊಮ್ಮೆ ಪ್ರತಿಪಾದಿಸಿದಾಗ ಅದು ಈವರೆಗೆ ಪ್ರಚಲಿತವಿದ್ದ ನಂಬಿಕೆಯನ್ನು ಸಡಿಲಗೊಳಿಸುತ್ತದೆ, ಹೊಸ ತಿಳುವಳಿಕೆಗೆ ಕೊಂಡೊಯ್ಯುತ್ತದೆ. ಅಲ್ಲದೆ ಗಾಂಧೀಜಿ ಹೇಳುವಂತೆ, ಹುಟ್ಟುವ ಎಲ್ಲಾ ತರ್ಕಗಳು ನಮ್ಮೊಳಗಿನ ಪವಿತ್ರ ಆಂತರಿಕ ಸ್ರೋತದ ಝರಿಯಿಂದ ಹೊರಹೊಮ್ಮಿದರೆ ಅದು ಜೀವನಪ್ರೀತಿಯನ್ನು ಉಳಿಸಿಕೊಡುತ್ತದೆ ಮತ್ತು ಸಹಜ ಬದುಕು ವಿಚಾರಕ್ಕಿಂತಲೂ ತರ್ಕ ಪ್ರತಿಪಾದಿಸುವ ಯಾವುದೇ ಸತ್ಯಕ್ಕಿಂತಲೂ ಹೆಚ್ಚು ಅಪ್ಯಾಯಮಾನವೂ ಮುಖ್ಯವೂ ಆಗಿದೆ ಎಂಬುದನ್ನು ತೋರಿಸಿಕೊಡುತ್ತದೆ.

ವಸ್ತುಗಳನ್ನು ಕೊಂಡುಕೊಳ್ಳುವ ಮೂಲಕ ನಾವು ಸಂತೋಷವಾಗಿರಬಲ್ಲೆವು ಎಂಬ ಮನೋಧರ್ಮ ಮನುಷ್ಯಸಂಬಂಧಗಳನ್ನು, ಅದರಿಂದ ಹುಟ್ಟುವ ಸಂತೋಷವನ್ನು ಕಡೆಗಣಿಸುತ್ತದೆ. ಜಾಗತೀಕರಣದ ಯಶಸ್ಸಿನ ಮೂಲಗುಟ್ಟು ಜನಗಳ ದೌರ್ಬಲ್ಯಗಳಲ್ಲಿ ಅಡಗಿದೆ ಎಂಬುದನ್ನು ನಾವು ಗುರುತಿಸಬೇಕು. ಮನುಷ್ಯನ ಮನಸ್ಸಿನಲ್ಲಿರುವ ಎಲ್ಲ ಬಗೆಯ ದೌರ್ಬಲ್ಯಗಳನ್ನು ಜಾಗತೀಕರಣ ಬಂಡವಾಳ ಮಾಡಿಕೊಂಡಿದೆ. ಹಾಗೆ ನೋಡಿದರೆ ಎಲ್ಲ ವ್ಯಾಪಾರಿ ಸಂಸ್ಥೆಗಳು ಅಗತ್ಯಕ್ಕಿಂತ ಅಧಿಕವಾದ ಕೃತಕ ಆವಶ್ಯಕತೆಗಳನ್ನು

ಸೃಷ್ಟಿಸಿ ಅವನ ದೌರ್ಬಲ್ಯವನ್ನು ಬಂಡವಾಳ ಮಾಡಿಕೊಂಡು ಬೆಳೆಯುವುದೇ ಹೆಚ್ಚು. ಅಲ್ಪ ತೃಪ್ತಿ, ಪರಸ್ಪರ ಪ್ರೀತಿಗಳು ಬಹುಶಃ ಮನುಷ್ಯನ ವಸ್ತುಸಂಬಂಧಿ ಅವಲಂಬನೆಯನ್ನು ಕಡಿಮೆ ಮಾಡುವುದರಿಂದ ಇದು ಜಾಗತಿಕ ಮಾರುಕಟ್ಟೆಗೆ ಅಡಚಣೆ. ಹಾಗಾಗಿ ತನ್ನದೇ ಆದ ಕುಟಿಲ ವಿಧಾನಗಳಿಂದ ಜಾಗತಿಕ ಮಾರುಕಟ್ಟೆ ಮನುಷ್ಯ ಸಂಬಂಧಗಳು ಹದಗೆಡುವಂತೆ ಮಾಡುತ್ತದೆ. ವಸ್ತುವಿಗೆ ಹೊರತಾದ ಭಾವನಾತ್ಮಕ ಸಂಬಂಧಗಳ ಸೌಂದರ್ಯ ಮನುಷ್ಯ ವ್ಯವಹಾರದಲ್ಲಿ ಮುಖ್ಯ ಪಾತ್ರ ವಹಿಸುವುದೇ ಇಲ್ಲ. ದಿನೇದಿನೇ ಭಾವನೆಗಳು ಬಡವಾಗುತ್ತವೆ. ಒಂದು ರೋಗಗ್ರಸ್ತ ಸಮಾಜ ಹುಟ್ಟಲು ಇದಕ್ಕಿಂತ ಹೆಚ್ಚಿನದೇನೂ ಬೇಡ. ಈಗಾಗಲೇ ನಮ್ಮ ಸಮಾಜ ರೋಗಗ್ರಸ್ತವಾಗಿದೆ. ಇದಕ್ಕೆ ಕಾರಣ ಸರಕುಸಂಸ್ಕೃತಿ. ಸರಕುಸಂಸ್ಕೃತಿಯಿಂದ ಭಾವನೆಗಳು ಬಡವಾಗುತ್ತವೆ. ಭಾವನೆಗಳು ಬಡವಾದರೆ ಅವು ಅನಾರೋಗ್ಯಕರ ತಿರುವು ಪಡೆಯುತ್ತವೆ. ಇದು ನೇತ್ಯಾತ್ಮಕ ಚಿಂತನೆಗೆ ಕಾರಣವಾಗುತ್ತದೆ. ನೇತ್ಯಾತ್ಮಕ ಚಿಂತನೆ ಮತ್ತಷ್ಟು ರೋಗಗ್ರಸ್ತ ಮನಸ್ಸುಗಳಿಗೆ ಕಾರಣವಾಗುತ್ತದೆ. ಹೀಗೆ ವಿಷವರ್ತುಲ ಮುಂದುವರಿದು ಸಮಾಜದ ಎಲ್ಲರೂ ರೋಗಗ್ರಸ್ತರಾಗಿ ನೇತ್ಯಾತ್ಮಕ ಚಿಂತನೆಗಳೇ ಸಮಾಜದ ಪ್ರಧಾನ ಮನೋಧರ್ಮವಾಗಿ ಬಿಡುತ್ತದೆ. ಕೆಟ್ಟವರೇ ಹೆಚ್ಚು ಸಂಖ್ಯೆಯಲ್ಲಿರುವ ಸಮಾಜದಲ್ಲಿ ಮತ್ತಷ್ಟು ಕೆಟ್ಟವರು ಸುಲಭವಾಗಿ ಸೇರ್ಪಡೆಯಾಗುತ್ತಾರೆ. ಈ ನೇತ್ಯಾತ್ಮಕ ಚಿಂತನೆಗಳು ಶೈಶವ-ಬಾಲ್ಯಗಳನ್ನು ಹೊಕ್ಕು ವಿಚ್ಛಿದ್ರಕಾರಿ ಮನಸ್ಸುಗಳನ್ನು ಸೃಷ್ಟಿಸಬಲ್ಲುದು. ನೇತ್ಯಾತ್ಮಕತೆ ಅಸಹನೀಯವಾದಾಗ ಮಾತ್ರ ಎಲ್ಲರೂ ಮೌಲ್ಯಗಳ ಕುರಿತು, ಅಧ್ಯಾತ್ಮದ ಕುರಿತು ಮಾತನಾಡುತ್ತಾರೆ. ಹಿಂದೆ ಎರಡನೇ ಮಹಾಯುದ್ಧದ ಸಮಯದಲ್ಲಿ ಅಮೆರಿಕಾದ ಅಧ್ಯಾಪಕರು ಶಾಲಾ ಪಠ್ಯಕ್ರಮದಲ್ಲಿ ಅಧ್ಯಾತ್ಮವನ್ನು ಸೇರಿಸಬೇಕೆಂದು ಸಲಹೆ ನೀಡಿದ್ದರಂತೆ. ಏಕೆಂದರೆ ಯುದ್ಧಕ್ಕೆ ಕಾರಣವಾದ ಅಂದಿನ ರಾಜಕೀಯ, ಸಾಮಾಜಿಕ ಪರಿಸ್ಥಿತಿಗಳು ಕೇವಲ ಬೌದ್ಧಿಕ ಕಸರತ್ತಿನಿಂದ ಪರಿಹರಿಸಬಹುದಾದ ಸಮಸ್ಯೆಗಳಾಗಿರಲಿಲ್ಲ. ಬೌದ್ಧಿಕತೆಯನ್ನು ಮೀರಿದ ಉನ್ನತ ಭಾವನೆಗಳಷ್ಟೇ ಇದಕ್ಕೆ ಪರಿಹಾರವಾದೀತೆಂದು ಆ ಅಧ್ಯಾಪಕರು ಮನಗಂಡಿದ್ದರೆಂದು ಕಾಣುತ್ತದೆ. ಹಾಗೆಯೇ ಯುದ್ಧದಲ್ಲಿ ಸತ್ತ ಸೈನಿಕನೊಬ್ಬನ ಜೇಬಿನಲ್ಲಿ ಒಂದು ಪುಸ್ತಕ ದೊರೆಯಿತಂತೆ. ಅದರಲ್ಲಿ ಆತ ಬರೆದಿದ್ದನಂತೆ "ಮನುಷ್ಯರಿಗೆ ಉನ್ನತವಾದ ಒಂದು ಧರ್ಮ ಬೇಕು. ಅದು ಇಲ್ಲದೇ ಇರುವುದರಿಂದಲೇ ಯುದ್ಧಗಳು ಸಂಭವಿಸುತ್ತಿವೆ, ಅನಾಹುತಗಳಾಗುತ್ತವೆ" ಎಂದು. ಬಹುಶಃ ಈ ಸೈನಿಕ ಮಾನವೀಯ ಮೌಲ್ಯಗಳು ಉತ್ತಮವಾದ ಧರ್ಮದಿಂದ ಹುಟ್ಟುತ್ತವೆ ಎಂದು ಭಾವಿಸಿದ್ದಿರಬೇಕು. ಏನೇ ಆದರೂ ನೇತ್ಯಾತ್ಮಕ ಚಿಂತನೆಗಳು ಸಮಾಜದಲ್ಲಿ ಹೆಚ್ಚಾಗದಂತೆ ತಡೆಯಬೇಕಾದರೆ ಅದು ಸರಕು ಸಂಸ್ಕೃತಿಯ ಮಿಥ್ಯೆಯನ್ನು ಬಯಲು ಮಾಡುವುದರಿಂದ ಮಾತ್ರ ಸಾಧ್ಯ.

ಧನಾತ್ಮಕ ಚಿಂತನೆಯ ಶಿಬಿರಗಳನ್ನು ಶಿಕ್ಷಣ ಇಲಾಖೆ ಇತ್ತೀಚೆಗೆ ನಡೆಸುತ್ತಿರುವುದು ಸ್ತುತ್ಯರ್ಹ. ಮಕ್ಕಳ ಒಡನಾಟದಲ್ಲಿ ಅಧ್ಯಾಪಕರು ಈ ಧನಾತ್ಮಕ ಚಿಂತನೆಗಳ ಪ್ರಾಮುಖ್ಯವನ್ನು

ಅರಿತು ಮಕ್ಕಳಿಗೆ ನೆರವು ನೀಡುವುದು ಅಗತ್ಯ. ಜೊತೆಗೆ ಪೋಷಕರೂ ಇದನ್ನು ಗಮನಿಸಬೇಕು. ಮಗುವಿನ ಭಾವನಾತ್ಮಕ ವ್ಯಕ್ತಿತ್ವವನ್ನು ನಿರಾಕರಿಸಿದರೆ ಅದು ಮುಂದೆಂದೂ ಸರಿಪಡಿಸಲಾಗದ ನೇತ್ಯಾತ್ಮಕತೆಗೆ ಕಾರಣವಾಗುತ್ತದೆಂದು ಸಂಶೋಧನೆಗಳು ತಿಳಿಸುತ್ತವೆ. ಆದರೆ ಅಸಂಖ್ಯಾತರಾದ ಅನಾಥ ಮಕ್ಕಳ ಬಹುದೊಡ್ಡ ಸಮಸ್ಯೆ ಎಂದರೆ ಭಾವನಾತ್ಮಕ ನೆರವಿನ ಅಭಾವ. ದಲೈ ಲಾಮ ಅವರೊಡನೆ ಕೆಲವು ವಿಜ್ಞಾನಿಗಳು ಮನುಷ್ಯನಲ್ಲಿ ವಿಧ್ವಂಸಕಕಾರಿ ಚಿಂತನೆಗಳು ಹೇಗೆ ಹುಟ್ಟುತ್ತವೆ ಎಂದು ಒಂದು ಚರ್ಚೆಯಲ್ಲಿ ತೊಡಗಿದ್ದರು. ಆ ಚರ್ಚೆಯ ಸಂದರ್ಭದಲ್ಲಿ ಮೆದುಳಿನ ವಿಜ್ಞಾನಿಗಳು ಮೆದುಳಿನ ಸಂಶೋಧನೆಗಳನ್ನು ವಿವರಿಸುತ್ತಾ "Emotional deprivation" ಎಂದರೆ ಮಗುವಿಗೆ ಭಾವನಾತ್ಮಕ ನಿರಾಕರಣೆಯಾದಾಗ ಉಂಟಾಗುವ ಪರಿಣಾಮವನ್ನು ವಿವರಿಸಿದರು. ಯಾವ ಮಕ್ಕಳು ಶೈಶವ- ಬಾಲ್ಯಗಳಲ್ಲಿ ಇಂತಹ ನಿರಾಕರಣೆಗೆ ಒಳಗಾಗಿರುತ್ತಾರೋ ಅವರು ಮುಂದೆ ತಮ್ಮ ಭಾವನೆಗಳನ್ನು ಸಮತೋಲನದಲ್ಲಿಡಲು ವಿಫಲರಾಗಿ, ಕೊನೆಗೆ ವಿಚ್ಛಿದ್ರಕಾರಿ ಮನಸ್ಸುಗಳ ಒಡೆಯರಾಗುತ್ತಾರೆ. ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ಅನಾಥ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿರುವ ಬಗ್ಗೆ ಮತ್ತು ಆ ಕಾರಣದಿಂದ ಅವರೆಲ್ಲಾ ಭಾವನಾತ್ಮಕ ನಿರಾಕರಣೆಗೆ ಒಳಗಾಗುತ್ತಿರುವ ಬಗ್ಗೆ ಚರ್ಚೆ ನಡೆಯಿತು. ಆಫ್ರಿಕಾದ ಶೇಕಡ ಇಪ್ಪತ್ತೇಳರಷ್ಟು ಮಹಿಳೆಯರು ಹೆಚ್.ಐ.ವಿ. ಪೀಡಿತರಾಗಿರುವುದರಿಂದ ಆಫ್ರಿಕಾ ಏಷ್ಯಾ ಖಂಡಗಳಲ್ಲಿ ಮಿಲಿಯಂತರ ಮಕ್ಕಳು ತಾಯಿಯ ಪ್ರೀತಿಯಿಂದ ವಂಚಿತರಾಗುತ್ತಾರೆ ಅಥವಾ ಭಾವನಾತ್ಮಕ ನಿರಾಕರಣೆಗೆ ಒಳಗಾಗುತ್ತಾರೆ. ಇಂತಹ ಮಕ್ಕಳು ಮುಂದೆ ನೇತ್ಯಾತ್ಮಕ ಚಿಂತನೆಗಳ ಗುಡಾಣವಾಗಿ ಬಿಡುತ್ತಾರೆ. ಈ ಕುರಿತು ಚರ್ಚಿಸಿದಾಗ ದಲೈ ಲಾಮ ಅವರು ತೀವ್ರವಾಗಿ ನೊಂದು ದುಃಖಿತರಾದರಂತೆ. ಈ ಸಂದರ್ಭದಲ್ಲಿ "ನಾವು ಮಕ್ಕಳನ್ನು ಪ್ರೀತಿಸಿದ್ದರೆ ಪ್ರಪಂಚದಲ್ಲಿ ಯುದ್ಧವೆಂಬುದೇ ಇರುತ್ತಿರಲಿಲ್ಲ" ಎಂಬ ಜೆ. ಕೃಷ್ಣಮೂರ್ತಿ ಯವರ ಮಾತು ನೆನಪಾಗುತ್ತದೆ.

ವಸ್ತುಗಳಿಗಿಂತ ಮನುಷ್ಯನೇ ಮುಖ್ಯ

ಮನುಷ್ಯ ಯಾರು? ಅವನು ಪಡೆದಿರುವ ಕೌಶಲಗಳು ಅವನನ್ನು ಪ್ರತಿನಿಧಿಸುತ್ತವೆಯೆ ಅಥವಾ ಅವನು ಪಡೆದುಕೊಂಡಿರುವ ಮೌಲ್ಯಗಳು ಅವನನ್ನು ಪ್ರತಿನಿಧಿಸುತ್ತವೆಯೆ? ಮನುಷ್ಯ ಕಳೆದುಹೋಗುತ್ತಿದ್ದಾನೆ ಎಂದು ನಾವು ಮಾತನಾಡುವಾಗ ಈ ಎರಡರಲ್ಲಿ ಯಾವುದು ಕಳೆದುಹೋಗುತ್ತಿದೆ? ತಾತ್ತ್ವಿಕವಾಗಿ ಮಾತನಾಡುವಾಗ ನಾವು ಮೌಲ್ಯಗಳ ಕುರಿತಾಗಿಯೇ ಮಾತನಾಡುತ್ತೇವೆ. ಮನುಷ್ಯನನ್ನು ನಾವು ಅವನ ಮೌಲ್ಯಗಳೊಂದಿಗೆ ಗುರುತಿಸುತ್ತೇವೆ. ಆದರೆ ನಮ್ಮ ಶಾಲಾಶಿಕ್ಷಣ ಇಂದು ಒತ್ತುಕೊಡುತ್ತಿರುವುದು ಪರಿಣತಿ- ಕೌಶಲ-ತಂತ್ರಜ್ಞಾನಗಳಿಗೆ. ಮೌಲ್ಯವಂತ ವ್ಯಕ್ತಿಗಳು ನಮ್ಮ ಶಾಲಾವ್ಯವಸ್ಥೆಯಲ್ಲಿ ಮನ್ನಣೆ ಗಳಿಸುವುದೇ ಇಲ್ಲ. ಶಾಲಾವ್ಯವಸ್ಥೆ ಹೀಗೆ ಒಬ್ಬನಿಗೆ ಕೌಶಲ ಇರಲಿ ಇಲ್ಲದಿರಲಿ, ಪರಿಣತಿ

ಇರಲಿ ಇಲ್ಲದಿರಲಿ, ಆತ ಮೌಲ್ಯವಂತ ಶಿಕ್ಷಕ ಎಂಬ ಕಾರಣಕ್ಕಾಗಿ ಅವನನ್ನು ವಿಶೇಷವಾಗಿ ಗುರುತಿಸಿ ಅಂತಹವರ ಬದ್ಧತೆಯನ್ನು, ಅವರು ಅನುಸರಿಸುತ್ತಿರುವ ತತ್ತ್ವಗಳನ್ನು, ಮೌಲ್ಯಗಳನ್ನು ಗುರುತಿಸಿ ಗೌರವಿಸುತ್ತದೆಯೇ? ಮೌಲ್ಯಗಳಿಗೆ ಮನ್ನಣೆ ಇಲ್ಲದ ಸ್ಥಳದಲ್ಲಿ ಮಕ್ಕಳು ಮೌಲ್ಯಗಳನ್ನು ಗಳಿಸುವುದಾದರೂ ಹೇಗೆ? ಪರೀಕ್ಷೆಯ ಅಂಕಗಳಿಗಿಂತ ಶಾಲಾ ಬಾಲಕರ ಬಾಲಕಿಯರ ಮೌಲ್ಯವೇ ಮುಖ್ಯ ಎಂದು ಒತ್ತಿ ಹೇಳುವ, ಮೌಲ್ಯವುಳ್ಳ ಮಕ್ಕಳನ್ನು ಮೌಲ್ಯಕ್ಕಾಗಿ ಗುರುತಿಸುವ ಪದ್ಧತಿ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಜಾರಿಗೆ ಬರಬೇಕು. ಅಧ್ಯಾಪಕರಲ್ಲೇ ಆಗಲೀ ಅಥವಾ ಮಕ್ಕಳಲ್ಲೇ ಆಗಲೀ ಕಂಡು ಬರುವ ಮೌಲ್ಯಗಳನ್ನು ಬಹಿರಂಗವಾಗಿ ಗುರುತಿಸಿ ಅದು ಅನುಸರಣೀಯ ಎಂಬ ಸಂದೇಶವನ್ನು ಕೊಡಲು ಸಾಧ್ಯವಾಗಬೇಕು. ಕೌಶಲಗಳು ಅಗತ್ಯಕ್ಕಿಂತ ಹೆಚ್ಚು ಪ್ರಾಮುಖ್ಯ ಪಡೆಯುತ್ತಿರುವುದು ಕಡಿಮೆಯಾಗಬೇಕು. ಜೀವನವನ್ನು ಸಮಗ್ರವಾಗಿ ನೋಡಬಲ್ಲ ಒಂದು ಸರಳ ಜೀವನದೃಷ್ಟಿಯನ್ನು ರೂಪಿಸುವ ಶಿಕ್ಷಣ ಇಂದು ನಮಗೆ ಬೇಕು.

ಇಂತಹ ಸನ್ನಿವೇಶದಲ್ಲಿ ಗಾಂಧೀಜೀವನ ಮಾದರಿ ನಮಗೆ ಆಸರೆಯಾಗಿ ನಿಲ್ಲುತ್ತದೆ. ಗಾಂಧೀ ಕುಟೀರದ ಬಗ್ಗೆ ಆಳವಾದ ಚಿಂತನೆಯನ್ನು ಹರಿಯಬಿಟ್ಟ ಇವಾನ್ ಇಲಿಯಚ್ ಎಂಬ ಚಿಂತಕ ಸರಳ ಜೀವನವನ್ನು ಮತ್ತು ಗಾಂಧೀ ಕುಟೀರದ ಸರಳತೆಯ ಬಗೆಗೆ ಹೇಳುವ ಮಾತುಗಳನ್ನು ಗಮನಿಸಿ. ಮೊದಲನೆಯದಾಗಿ ಗಾಂಧೀ ಕುಟೀರದಲ್ಲಿ ಅನಗತ್ಯವಾದ ವಸ್ತುಗಳೇ ಇಲ್ಲ. ಇದು ವಸ್ತುಗಳಿಗಿಂತ ಮನುಷ್ಯ ಮುಖ್ಯ ಎಂಬ ಸಂದೇಶವನ್ನು ನೀಡುತ್ತದೆ. ನಮ್ಮ ಆಧುನಿಕ ಮನೆಗಳನ್ನೇ ನೋಡಿ. ಮನೆ ಕಟ್ಟುವಾಗ ನಾವು ನಮ್ಮ ಕಂಪ್ಯೂಟರ್‌ಗಳಿಗೆ, ವಾಷಿಂಗ್ ಮೆಷೀನಿಗೆ, ಫ್ರಿಡ್ಜ್ ಮತ್ತು ಟಿ.ವಿ.ಗೆ – ಹೀಗೆ ನಾವು ಬಳಸುವ ಅನೇಕಾನೇಕ ಉಪಕರಣಗಳನ್ನು ಎಲ್ಲಿ ಇಡಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಮನೆ ನಿರ್ಮಿಸುತ್ತೇವೆ. ಈ ವಸ್ತುಗಳ ನಡುವೆ ಹೇಗೋ ಮಾಡಿ ಮನುಷ್ಯ ಹೊಂದಿಕೊಂಡು ಬದುಕಬೇಕು. ಸ್ವತಂತ್ರವಾಗಿ ಓಡಿ ಆಡುವ ನಮ್ಮ ಮಕ್ಕಳಿಗೆ ಈ ಇಕ್ಕಟ್ಟಿನ ಪ್ರದೇಶಗಳಿಗೆ ಹೊಂದಿಕೊಂಡು ಓಡುವುದನ್ನು, ಆಡುವುದನ್ನು ಕಲಿಸುತ್ತೇವೆ. ವಸ್ತುವೇ ಮುಖ್ಯವಾದ ಈ ಎರಡನೇ ದರ್ಜೆಯ ಜೀವನವಿಧಾನಕ್ಕೆ ಮಕ್ಕಳನ್ನು ಪಳಗಿಸುತ್ತೇವೆ. ದೊಡ್ಡವರಾದ ಮೇಲೆ ಇವರೂ ತಮ್ಮ ಮಕ್ಕಳನ್ನು ಇದೇ ಬಗೆಯ ಜೀವನಕ್ಕೆ ಪಳಗಿಸುತ್ತಾರೆ. ಇದನ್ನು ಪ್ರಶ್ನಿಸುವ ಶಕ್ತಿಯನ್ನು ಶಿಕ್ಷಣ ನಮಗೆ ನೀಡುತ್ತಿಲ್ಲ.

ವಸ್ತುಗಳನ್ನು ಜೀವನಪರ್ಯಂತ ಸಂಗ್ರಹಿಸುತ್ತಲೇ ಇದ್ದರೆ ಇವು ಮನೆಯ ತುಂಬಾ ತುಂಬಿಕೊಂಡು ಕೊನೆಗೆ ಮನೆಯ ಮಾಲೀಕರಿಗೆ ಸ್ಥಳವಿಲ್ಲದಂತೆ ಆಗುವುದುಂಟು. ಹಾಗಾದಾಗ ಹಳೆಯ ವಸ್ತುಗಳನ್ನು ಯಾರಿಗಾದರೂ ದಾನ ಮಾಡುತ್ತೇವೆ ಅಥವಾ ಕಾರ್ ಷೆಡ್‌ಗಳಲ್ಲಿ ತುಂಬಿಕೊಳ್ಳುತ್ತೇವೆ. ಜೀವನಪರ್ಯಂತ ಹೀಗೆ ಹೊಸ ವಸ್ತುಗಳನ್ನು ಖರೀದಿಸುತ್ತಲೇ ಇರುತ್ತೇವೆ; ಮನೆಗೆ ತುಂಬಿಸಿಕೊಳ್ಳುತ್ತಲೇ ಇರುತ್ತೇವೆ. ಇದು

ಕೇವಲ ವಸ್ತು ಮತ್ತು ಅದರ ವೆಚ್ಚದ ಪ್ರಶ್ನೆಯಷ್ಟೆ ಅಲ್ಲ. ಹೀಗೆ ಅನಾವಶ್ಯಕವಾದ ಬಾಹ್ಯಾವಲಂಬನೆ ಮನುಷ್ಯನ ಧೀಶಕ್ತಿಯನ್ನು ಕುಗ್ಗಿಸುತ್ತದೆ. ಅಂತರಂಗವನ್ನು ಬಡವಾಗಿಸುತ್ತದೆ. ಬಗೆಬಗೆಯ ವಸ್ತುಗಳ ಮೇಲಿನ ಅವಲಂಬನೆ ಕ್ರಮೇಣ ಮನುಷ್ಯನ ಸ್ವಂತಿಕೆಗೆ ಮಾರಕವಾಗುತ್ತದೆ. ಅವನ ಹಾವಭಾವಗಳು, ನಂಬುವ ಮೌಲ್ಯಗಳು, ತಳೆಯುವ ನಿಲುವುಗಳು ಇವನು ಸಂಗ್ರಹಿಸಿರುವ ವಸ್ತುಗಳಿಂದ ಪ್ರಭಾವಿತವಾಗುತ್ತವೆ. ಈ ವಸ್ತುಗಳ ಮೇಲಿನ ತನ್ನ ಮಾಲೀಕತ್ವವನ್ನು ಹಳಿಯುವ, ನಿರಾಕರಿಸುವ ಯಾವ ನಿಲುವನ್ನೂ ಅಥವಾ ಯಾವ ಮೌಲ್ಯವನ್ನೂ ಇವನು ಪ್ರತಿಪಾದಿಸಲಾರ, ಒಪ್ಪಲಾರ. ಇವನ ತರ್ಕದ ಸರ್ಕಸ್‌ಗಳು ಈ ವಸ್ತುಗಳನ್ನು ತನಗಾಗಿ ಉಳಿಸಿಕೊಂಡು ಪ್ರತಿಪಾದಿಸಬಹುದಾದ ಸಾಮಾಜಿಕನ್ಯಾಯವಾಗಿರುತ್ತದೆ. ಈ ವಸ್ತುಗಳ ಮೇಲಿನ ಮಾಲೀಕತ್ವವನ್ನು ಅನುಮೋದಿಸುವ ತರ್ಕಸರಣಿಯಾಗಿರುತ್ತದೆ. ಈ ವಸ್ತುಗಳ ಅನಿವಾರ್ಯತೆಯನ್ನು ಒಪ್ಪುವ ಜೀವನದೃಷ್ಟಿಯಾಗಿರುತ್ತದೆ. ಹೀಗೆ ಅನಗತ್ಯ ವಸ್ತುಗಳು ನಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರುತ್ತ ನಮ್ಮ ಅಂತರಂಗವನ್ನು ಬಡವಾಗಿಸುತ್ತವೆ. ಮನುಷ್ಯನಲ್ಲಿ ಸ್ವಾಭಾವಿಕವಾಗಿಯೇ ಇರುವ ಪ್ರೀತಿ ಅನುಕಂಪಗಳು ಈ ಅನಗತ್ಯ ವಸ್ತುಗಳ ವ್ಯಾಮೋಹದಿಂದ ಮರೆಯಾಗುತ್ತವೆ. ಒಟ್ಟಿನಲ್ಲಿ ಮನುಷ್ಯ ವಸ್ತುಗಳನ್ನು ಗಳಿಸುತ್ತ ಪ್ರೀತಿಸುವ ಶಕ್ತಿಯನ್ನು ಕಳೆದುಕೊಂಡುಬಿಡುತ್ತಾನೆ. ಅವನಿಗೆ ವಸ್ತುಗಳು ಅದನ್ನು ಉತ್ಪಾದನೆ ಮಾಡುವ ಮನುಷ್ಯನಿಗಿಂತ ಹೆಚ್ಚು ಮೌಲ್ಯವುಳ್ಳದ್ದಾಗಿ ಕಾಣುತ್ತದೆ. ಅವನ ತ್ಯಾಗ ನಿಷ್ಠೆಗಳೆಲ್ಲ ಏನಿದ್ದರೂ ಈ ವಸ್ತುಗಳಿಗಾಗಿಯೇ ಹೊರತು ಈ ವಸ್ತುಗಳ ಹಿಂದಿರುವ ಮನುಷ್ಯನಿಗಾಗಿ ಅಲ್ಲ. ಮನುಷ್ಯ ಸಂಬಂಧಗಳು ಹಳಸಿಹೋದರೂ ಚಿಂತೆಯಿಲ್ಲ, ವಸ್ತುಗಳ ಮೇಲಿನ ಸ್ವಾಮ್ಯವನ್ನು ಅವನು ಬಿಡಲಾರ.

ಇವಾನ್ ಇಲಿಯಚ್ ಹೇಳುತ್ತಾನೆ ಹೀಗೆ ಹೆಚ್ಚು ಹೆಚ್ಚು ಬಾಹ್ಯ ವಸ್ತುಗಳನ್ನು ಅವಲಂಬಿಸುವುದು ಒಂದು ವಿಕಲತೆಯ ಸಂಕೇತವಲ್ಲವೇ? ಜನ ತಮ್ಮ ಸಹಜ ಶಕ್ತಿಯನ್ನು ಮರೆಮಾಚಿ ಬಾಹ್ಯ ಸಲಕರಣೆಗಳಿಂದ ಆಕರ್ಷಿತರಾಗಿ ನ್ಯೂನತೆಗಳುಳ್ಳ ಜನರಂತೆ ನಡೆದುಕೊಳ್ಳುವುದು ನಾಗರಿಕತೆ ಎಂದು ಹೇಗೆ ಹೇಳಬಹುದು? ಎಂತಹ ಐಷಾರಾಮಿ ಆಸ್ಪತ್ರೆಯೂ ಅನಾರೋಗ್ಯವನ್ನು ಸೂಚಿಸುತ್ತದೆಯೇ ಹೊರತು ಅದನ್ನು ವೈಭವದ ಸಂಕೇತ ಎಂದು ಭಾವಿಸಲು ಸಾಧ್ಯವಿಲ್ಲ. ವಿಪರ್ಯಾಸವೆಂದರೆ ಕೈಕಾಲುಗಳು ಗಟ್ಟಿಮುಟ್ಟಾಗಿದ್ದರೂ ಈ ಮನುಷ್ಯ ಕಾಲಿಲ್ಲದವನು ಬಳಸುವ ಊರುಗೋಲನ್ನು ಹಿಡಿದು ನಡೆಯುವುದೇ ಒಂದು ಹೆಗ್ಗಳಿಕೆ ಎಂದು ಭಾವಿಸುವಂತಿದೆ ಇಂದಿನ ನಮ್ಮ ನಾಗರಿಕ ನಡವಳಿಕೆಗಳು.

ಅಗತ್ಯಕ್ಕಿಂತ ಹೆಚ್ಚಾಗಿ ವಸ್ತುಗಳನ್ನು ಬಳಸುವ ಸಂಸ್ಕೃತಿಯನ್ನು ಸರಕುಸಂಸ್ಕೃತಿ ಎನ್ನಬಹುದು. ಕೊಳ್ಳುಬಾಕ ಸಂಸ್ಕೃತಿ, ಸರಕುಸಂಸ್ಕೃತಿ ಮನುಷ್ಯನ ಮಾಹಿತಿ ತಂತ್ರಜ್ಞಾನದ ವೈಭವವನ್ನೂ ವಿವೇಕದ ಅಭಾವವನ್ನೂ ಸೂಚಿಸುತ್ತದೆ. ಹೆಚ್ಚು ಹೆಚ್ಚು ಕೇಳಿ

ಪಡೆದುಕೊಳ್ಳುವುದು ವಿವೇಕದ ಲಕ್ಷಣವೋ ಎಂಬಂತೆ ಜನ ಭಾವಿಸುತ್ತಾರೆ. ನ್ಯಾಯವಾಗಿ ಸಲ್ಲಬೇಕಾದದ್ದನನ್ನು ಧೈರ್ಯವಾಗಿ ಕೇಳಿಪಡೆಯುವುದರಲ್ಲಿ ತಪ್ಪಿಲ್ಲ. ಆದರೆ ಸಂದರ್ಭೋಚಿತವಾದ ಇತಿಮಿತಿಗಳನ್ನು ಕಡೆಗಣಿಸಿ, ಎಲ್ಲೆಮೀರಿದ, ಸೌಜನ್ಯವಿಲ್ಲದ ನಡವಳಿಕೆಯನ್ನು ಧೈರ್ಯದ, ಆತ್ಮವಿಶ್ವಾಸದ ಕುರುಹಾಗಿ ಬಿಂಬಿಸುತ್ತಾ ಯಶಸ್ಸಿನ ಮೆಟ್ಟಿಲೇರುವುದು ಆಧುನಿಕ ಮನೋವೈಜ್ಞಾನಿಕ ವಿಧಾನವಾಗಿದೆ. ಈ ಸಂದರ್ಭದಲ್ಲಿ ಮಹಾಭಾರತದಲ್ಲಿ ಗಂಡಂದಿರನ್ನು, ಶಸ್ತ್ರಗಳನ್ನು ಕಳೆದುಕೊಂಡು, ವಿವಸ್ತ್ರಳಾಗಿ ಕೌರವನ ಸಭೆಯಲ್ಲಿ ನಿಂತ ದ್ರೌಪದಿಯ ನೆನಪಾಗುತ್ತದೆ. ಧೃತರಾಷ್ಟ್ರ ಹೇಳುತ್ತಾನೆ, "ದ್ರೌಪದಿ ನಿನಗೆ ಅನ್ಯಾಯವಾಗಿದೆ, ನೀನು ಏನಾದರೂ ವರವನ್ನು ಕೇಳು". ದ್ರೌಪದಿ ಆ ವರದಿಂದ ತನ್ನ ಗಂಡಂದಿರನ್ನು ದಾಸ್ಯಮುಕ್ತರನ್ನಾಗಿ ಮಾಡುತ್ತಾಳೆ. ಧೃತರಾಷ್ಟ್ರ ಮತ್ತೊಂದು ವರವನ್ನು ಕೇಳುವಂತೆ ಹೇಳುತ್ತಾನೆ. ಆಗ ದ್ರೌಪದಿಯು ತನ್ನ ಗಂಡಂದಿರ ಶಸ್ತ್ರಾಸ್ತ್ರಗಳನ್ನು ಬಿಡಿಸಿಕೊಳ್ಳುತ್ತಾಳೆ. ಇಷ್ಟಕ್ಕೆ ತೃಪ್ತನಾಗದ ಧೃತರಾಷ್ಟ್ರ ಮತ್ತೊಂದು ವರವನ್ನು ಕೇಳುವಂತೆ ದ್ರೌಪದಿಗೆ ಹೇಳುತ್ತಾನೆ. ಆಗ **ದ್ರೌಪದಿ ಹೇಳುತ್ತಾಳೆ: "ಮಹಾರಾಜ, ನಾನು ಕ್ಷತ್ರಿಯ ಕನ್ಯೆ. ಎರಡಕ್ಕಿಂತ ಹೆಚ್ಚು ವರ ಕೇಳಬಾರದು. ನಾನು ಮೂರನೇ ವರ ಕೇಳುವುದಿಲ್ಲ".** ಇಂತಹ ಒಂದು ಸಂಯಮದ ಮೌಲ್ಯ ನಮ್ಮ ನಡುವೆ ಈಗ ಏಕೆ ಕಾಣೆಯಾಗುತ್ತಿದೆ? ತಾವು ಕೇಳಿ ಪಡೆಯಬಹುದಾದ ಸಾಧ್ಯತೆಗಳಿಗೆ ಒಂದು ಗೆರೆಯನ್ನು ಗುರುತಿಸುವ ವಿವೇಕವನ್ನು ನಮ್ಮ ನಾಗರಿಕ ಜನ ಏಕೆ ಕಳೆದುಕೊಳ್ಳುತ್ತಿದ್ದಾರೆ? ವಾಚ್ಯವಾಗಿ ಕೇಳಿಪಡೆಯುವುದು ಮನಃಶಾಸ್ತ್ರಜ್ಞರು ಕಲಿಸಿಕೊಡುವ ಒಂದು ಯಶಸ್ಸಿನ ಸೂತ್ರ. ಇದು ಅನಾಗರಿಕಮಟ್ಟ ತಲುಪುವುದನ್ನು ನಮ್ಮ ಜನ ಗುರುತಿಸುವುದೇ ಇಲ್ಲ. ಎಷ್ಟು ಕೊಟ್ಟರೂ ಬೇಕೆಂಬ ಅಥವಾ ಸುಲಭ ಬೆಲೆಗೆ ಸಿಗುತ್ತದೆ ಎಂದರೆ ಮಾರಾಟ ಮಳಿಗೆಗಳಿಗೆ ಲಗ್ಗೆ ಹಾಕುವ ನಮ್ಮ ಜನಗಳಿಗೆ ವಿವೇಕ ಇದೆ ಎಂದು ತಿಳಿಯಬಹುದೆ?